ದತ್ತಿ ಉಪನ್ಯಾಸ ಮಾಲೆ – ೩

ವೈವಸ್ವತ ಮನು

ವಿದ್ಯಾಲಂಕಾರ

ಪ್ರೊ|| ಎಸ್. ಕೆ. ರಾಮಚಂದ್ರರಾವ್

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ

ಬೆಂಗಳೂರು–19

ಬೆಲೆ : ರೂ. 5–00

ದತ್ತಿ ಉಪನ್ಯಾಸ ಮಾಲೆ – ೩

ವೈವಸ್ವತ ಮನು

(ಡಾ॥ ಶಂ. ಬಾ. ಜೋಶಿ ಗೌರವೋಪನ್ಯಾಸ)

ವಿದ್ಯಾಲಂಕಾರ

ಪ್ರೊ॥ ಎಸ್. ಕೆ. ರಾಮಚಂದ್ರರಾವ್

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ

54, 3ನೆಯ ಅಡ್ಡಬೀದಿ, ಗವಿಪುರಂ ವಿಸ್ತರಣ

ಬೆಂಗಳೂರು–19

ಬೆಲೆ: ರೂ. 5–00

VAYVASVATA MANU—Endowment Lecture in honour of Dr S. B. Joshi, Noted Scholar, by Prof. S. K. Ramachandra Rao. Published by B. M. Sri. Memorial Foundation, 54, 3rd Cross, Gavipuram Extension, Bangalore-560 019. Crown 8 vo, pp. VIII + 36 ; 1985.

All Rights Reserved

Price : Rs. 5

PRINTED AT SRI LAKSHMI PRINTERS, BEHIND SUBRAMANYA OIL MILL, NEAR KATHARAGUPPA, BANASHANKARI 3rd STAGE, BANGALORE - 560 085

ಮುನ್ನುಡಿ

ಡಾ॥ ಶಂ. ಬಾ. ಜೋಶಿಯವರು ನಾಡಿನ ಪ್ರಖ್ಯಾತ ವಿದ್ವಾಂಸರು, ಸಂಶೋಧಕರು. 1896ರ ಜನವರಿ 4ರಂದು ಬೆಳಗಾವಿ ಜಿಲ್ಲೆಯ ಗುರ್ಲ ಹೊಸೂರಿನ (ಗುರುಲ, ಗುರ್ಲ=ಗುರುಗಳ, ಹೊಸೂರು) ವೈದಿಕ ಮನೆತನಕ್ಕೆ ಸೇರಿದ ಚಿದಂಬರ ದೀಕ್ಷಿತರ ಸುಪುತ್ರನಾಗಿ ಜನಿಸಿದರು, ಶಂಕರರಾವ ಬಾಳದೀಕ್ಷಿತ ಜೋಶಿ. ತಮ್ಮ ಎಳೆಯ ವಯಸ್ಸಿನಲ್ಲಿಯೆ ತಂದೆಯನ್ನು ಕಳೆದುಕೊಂಡು ತಬ್ಬಲಿಯಾದ ಜೋಶಿ ಬಡತನದ ಬವಣೆಯಲ್ಲಿ ಬೆಳೆದವರು. ಧಾರವಾಡ ಜಿಲ್ಲೆಯ ಬೊಮ್ಮನಹಳ್ಳಿಯಲ್ಲಿ ಕನ್ನಡ ಶಿಕ್ಷಣ ಪಡೆದ ಶಂಕರ ಬಾಲನಿಗೆ ಇಂಗ್ಲಿಷ್ ಕಲಿಕೆಗೆ ಅವಕಾಶವೆ ಇರಲಿಲ್ಲ. ಮುಲ್ಕಿ ಪರೀಕ್ಷೆ ಮಾಡಿ ಧಾರವಾಡದ ಗೌರ್ನಮೆಂಟ್ ಟ್ರೇನಿಂಗ್ ಕಾಲೇಜಿನಲ್ಲಿ ಶಿಕ್ಷಕರ ತರಬೇತಿ ಪಡೆದು 1919ರಲ್ಲಿ ತರಬೇತು ಪಡೆದ ಕನ್ನಡ ಶಿಕ್ಷಕರಾಗಿ ಉದ್ಯೋಗ ಹಿಡಿದರು. ಘನ ಪಂಡಿತರೆಂದು ಹೆಸರಾದ ಮಹಾದೇವ ಪ್ರಭಾಕರ ಪೂಜಾರರ ಶಿಷ್ಯರು ಶಂ. ಬಾ. ಜೋಶಿ ಎಂದಮೇಲೆ ಪಾಂಡಿತ್ಯಸಂವರ್ಧನದ ಕಡೆಗೆ ಇವರಲ್ಲಿ ಒಲವು ಹೇಗೆ ಮೊಳೆಯಿತು ಎನ್ನುವುದನ್ನು ಊಹಿಸಿಕೊಳ್ಳಬಹುದು. ಸ್ವಲ್ಪ ಕಾಲ ಸ್ವಾತಂತ್ರ್ಯ ಸಂಗ್ರಾಮ ಇವರನ್ನು ಆಕರ್ಷಿಸಿತು. ಆದರೆ ಹೆಚ್ಚಿನ ವಿದ್ಯಾವ್ಯಾಸಂಗವಿಲ್ಲದೆ ದೇಶಸೇವೆಗೆ ನಿಂತರೆ ಅದಕ್ಕೆ ಮಹತ್ವ ಬರದು ಎಂದು ಮನವರಿಕೆಯಾಗಿ ಸ್ವಂತ ಅಭ್ಯಾಸದಿಂದ ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪಾಂಡಿತ್ಯವನ್ನು ಸಂಪಾದಿಸಿಕೊಂಡರು. ಕನ್ನಡ ನವೋದಯದಲ್ಲಿ ಪ್ರಮುಖ ಪಾತ್ರವಹಿಸಿದ ಗೆಳೆಯರ ಗುಂಪಿನಲ್ಲಿ ಬೇಂದ್ರೆ, ಬುರ್ಲಿ, ಮಳಿಯೆ ಗೋವರ್ಧನ ರಾವ್ ಅವರುಗಳ ಸಹವಾಸದಲ್ಲಿ ಶಂ. ಬಾ. ಅವರ ಸಾಹಿತ್ಯ ಕೃಷಿಗೆ ಒತ್ತಾಸೆ ದೊರೆಯಿತು. 1926ರಿಂದ 1946ವರೆಗೆ ಧಾರವಾಡದ ಹೈಸ್ಕೂಲಿನಲ್ಲಿ ಶಿಕ್ಷಕರಾಗಿಯೂ ಕೆಲಸ ಮಾಡಿದರು.

1930ರಿಂದ 1970ರವರೆಗೆ ಶಂ. ಬಾ. ಜೋಶಿಯವರ ಸಂಶೋಧನ ವ್ಯವಸಾಯ ಬಹಳ ಫಲಪ್ರದವಾಗಿ ಪರಿಣಮಿಸಿತು. 1930ರಿಂದ 1947ರ ಅವಧಿಯಲ್ಲಿ ಕಣ್ಮರೆಯಾದ ಕನ್ನಡ, ಕರ್ನಾಟಕದ ವೀರಕ್ಷತ್ರಿಯರು, ಕನ್ನಡದ ನೆಲೆ, ಕಂನುಡಿಯ ಹುಟ್ಟು, ಕನ್ನಡದ ಕಥೆ, ಇವು ಪ್ರಕಟವಾಗಿ, ಈ ವಿಷಯ ಗಳಲ್ಲಿ ಆಸಕ್ತರಾದವರಲ್ಲಿ ವಿಚಾರ ಪ್ರಚೋದನೆಯನ್ನು ಉಂಟುಮಾಡಿತು.

ಭಾಷೆಗೂ ಸಂಸ್ಕೃತಿಗೂ ಇರುವ ಬೇರ್ಪಡಿಸಲಾಗದ ನಂಟು ಇವರ ಚಿಂತನವನ್ನು ಆಕ್ರಮಿಸಿಕೊಂಡಿತು. ಭಾಷೆಯಿಂದಲೇ ಸಂಸ್ಕೃತಿ; ಸ್ಥಳನಾಮ, ವ್ಯಕ್ತಿನಾಮ, ದೈವತ ಸಂಪ್ರದಾಯಗಳು, ಮೊದಲಾದ ಸಂಸ್ಕೃತಿಯ ಬೇರುಗಳನ್ನು ಪರಿಶೀಲಿಸಿ ಜೀವನ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಬೇಕು ಎಂಬ ಇವರ ನಿಲುವು ಈ ಕಾಲದಲ್ಲಿ ಗಟ್ಟಿಯಾದ ನೆಲೆಯನ್ನು ಪಡೆಯಿತು. 'ಮಹಾರಾಷ್ಟ್ರದ ಮೂಲ' ಎಂಬ ಇವರ ಸಂಶೋಧನ ವಿಚಾರಗಳನ್ನು ಮರಾಠಿ ವಿದ್ವಾಂಸರು ಪುರಸ್ಕರಿಸಿದರು. ಕಾಲಕ್ರಮದಲ್ಲಿ ಶಂ.ಬಾ. ಜೋಶಿ ಅವರ ಆಸಕ್ತಿ ಋಗ್ವೇದ ವ್ಯಾಸಂಗದತ್ತ ಹರಿದು, ಇವರ ಸತ್ಯಾನ್ವೇಷಣ ಪ್ರವೃತ್ತಿ ಹೊಸದಿಕ್ಕಿನಲ್ಲಿ ಹರಿಯತೊಡಗಿತು. ಇದರ ಫಲವಾಗಿ, 'ಋಗ್ವೇದ ಸಾರ', 'ನಾಗಪ್ರತಿಮಾ ವಿಚಾರ' (1971), 'ಪ್ರವಾಹ ಪತಿತರ ಕರ್ಮ—ಹಿಂದೂ ಎಂಬ ಧರ್ಮ' (1976), 'ಬುಧನ ಜಾತಕ' (1980), ಇವು ಹೊರಬಂದವು.

1967ರಲ್ಲಿ ಶಂ. ಬಾ. ಜೋಷಿಯವರ ಎರಡು ಭಾಗಗಳ 'ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ' ಎಂಬ ಬೃಹತ್ ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂದಿತು. 1971ರಲ್ಲಿ ಮೈಸೂರು ವಿಶ್ವವಿದ್ಯಾ ನಿಲಯವು ಇವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿತು.

ವೈವಸ್ವತ ಮನು ವಿಚಾರ ಡಾ॥ ಶಂ. ಬಾ. ಜೋಶಿಯವರು ತಮ್ಮ ಆಳವಾದ, ಎಡೆಬಿಡದ ಸಂಶೋಧನೆಯ ಫಲವಾಗಿ ಪ್ರತಿಪಾದಿಸುತ್ತ ಬಂದಿರುವ, ಮಾನವ ಸಂಸ್ಕೃತಿಯ ಬೇರನ್ನೇ ಹಿಡಿದು ಅಲುಗಿಸಿ, ಅದರ ಮೇಲೆ ಹೊಸ ಬೆಳಕನ್ನು ಬೀರಲು ಹೊರಟಿರುವ ಮಹತ್ವದ ವಾದ. ಎಂದಮೇಲೆ, ಅದು ಕರ್ನಾಟಕ ಇಲ್ಲವೆ ಭಾರತಕ್ಕೆ ಮಾತ್ರ ಸೀಮಿತವಾದದ್ದಲ್ಲ; ವಿಶ್ವ ವ್ಯಾಪಕತ್ವವನ್ನು ಹೊಂದಿರುವ ಮೌಲಿಕ ವಿಚಾರ. ತಮ್ಮ ವಾದದ ಸತ್ಯಾಂಶದಲ್ಲಿ ಶಂಬಾ ಅವರಿಗೆ ದೃಢ ವಿಶ್ವಾಸ. ತಮ್ಮ ವಾದದ ಪ್ರಸಾರ ಆಗಬೇಕೆಂಬ ವಿಷಯದಲ್ಲಿ ಎಷ್ಟು ಕಳಕಳಿಯೋ ಅದನ್ನು ವಿಚಾರ ವಿಮರ್ಶೆಯ ಮೂಸೆಗೆ ಹಾಕಿ ಪರೀಕ್ಷೆ ಮಾಡಬೇಕು ಎನ್ನುವುದರಲ್ಲಿ ಅಷ್ಟೆ ಆಸಕ್ತಿ. ಎಂದೇ ಅವರು ತಮ್ಮ ವಾದವನ್ನು ಸಂಪೂರ್ಣವಾಗಿ ಒಪ್ಪದ ಪ್ರೊ॥ ಸಾ. ಕೃ. ರಾಮಚಂದ್ರ ರಾಯರಂಥ ಘನ ವಿದ್ವಾಂಸರ ಕೈಲಿ ಉಪನ್ಯಾಸ ಮಾಡಿಸಬೇಕು, ವಿಷಯವನ್ನು ಸಾರ್ವಜನಿಕ ಮಂಥನಕ್ಕೆ ಒಡ್ಡಬೇಕು ಎಂಬ ಅವರ ಅಪೇಕ್ಷೆಯನ್ನು

ಈಡೇರಿಸುವ ಸದವಕಾಶ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನಕ್ಕೆ ದೊರೆತದ್ದು ಸಂತೋಷದ ಸಂಗತಿ. ಈ ಬಗ್ಗೆ ಒಂದು ಮಾತು ಹೇಳಬೇಕಾಗಿದೆ.

ಡಾ॥ ಶಂ. ಬಾ. ಜೋಶಿಯ ಅಭಿಮಾನಿಗಳು, ಆಪ್ತಮಿತ್ರರು ಸೇರಿ ಡಾ॥ ಸಿದ್ಧಯ್ಯ ಪುರಾಣಿಕ ಅವರ ಅಧ್ಯಕ್ಷತೆಯಲ್ಲಿ ಒಂದು ಸನ್ಮಾನ ಸಮಿತಿಯನ್ನು ರಚಿಸಿ, ಸನ್ಮಾನದ ಅಂಗವಾಗಿ ಶಂಬಾ ಅವರಿಗೆ ಒಂದು ಅಭಿನಂದನ ಗ್ರಂಥವನ್ನು ಅರ್ಪಿಸಬೇಕೆಂದು ತೀರ್ಮಾನಿಸಿದರು. ಡಾ॥ ಎಂ. ಚಿದಾನಂದ ಮೂರ್ತಿ ಅವರ ಸಂಪಾದಕತ್ವದಲ್ಲಿ 'ಅಧ್ಯಯನ' ಅಭಿನಂದನ ಗ್ರಂಥವು ಸಿದ್ಧವಾಯಿತು. 1980ರ ಆಗಸ್ಟ್ ತಿಂಗಳಿನಲ್ಲಿ ಸನ್ಮಾನ ಸಭೆ ನಡೆದು, "ಅಧ್ಯಯನ"ವನ್ನು ಶಂಬಾ ಅವರಿಗೆ ಅರ್ಪಿಸಿ, ಪ್ರತಿಗಳನ್ನು ಮಾರಾಟಕ್ಕೆ ಬಿಡುಗಡೆ ಮಾಡಲಾಯಿತು. ಮಾರಾಟದ ಆದಾಯದಲ್ಲಿ ವೆಚ್ಚ ಕಳೆದು ಉಳಿದ 7001 ರೂ.ಗಳನ್ನೂ, ಮಾರಾಟ ಮಾಡಿ ಉಳಿದ 'ಅಧ್ಯಯನ'ದ ಪ್ರತಿಗಳನ್ನೂ ಪ್ರತಿಷ್ಠಾನಕ್ಕೆ ದತ್ತಿಯ ರೂಪದಲ್ಲಿ ನೀಡಬೇಕೆಂದು ಸನ್ಮಾನ ಸಮಿತಿ ತೀರ್ಮಾನಿಸಿ (18-12-82) ಆ ಮೊತ್ತವನ್ನೂ ಪ್ರತಿಗಳನ್ನೂ ಪ್ರತಿಷ್ಠಾನಕ್ಕೆ ನೀಡಿತು. "ಈ ದತ್ತಿನಿಧಿಯ ಮೇಲೆ ಬರುವ ಬಡ್ಡಿಯನ್ನು ಡಾ॥ ಶಂ. ಬಾ. ಜೋಶಿಯವರಿಗೆ ಪ್ರಿಯವಾದ ವಿಷಯಗಳ ಬಗ್ಗೆ ಅಥವಾ ಕರ್ನಾಟಕ ಸಂಸ್ಕೃತಿಯ ಬಗ್ಗೆ ಅಧ್ಯಯನ ಮಾಡಿರುವ ಅಥವಾ ಮಾಡುವ ಸಂಶೋಧಕರಿಗೆ ಉತ್ತೇಜನ ಅಥವಾ ಅನುದಾನ ರೂಪವಾಗಿ ನೀಡಬೇಕೆಂದು ಸಮಿತಿ ತನ್ನ ಉದ್ದೇಶವನ್ನು ತಿಳಿಸಿ"ದೆ. ಅಲ್ಲದೆ, "ಯಾರಿಗೆ ಅನುದಾನ ಅಥವಾ ಉತ್ತೇಜನ ಧನ ಕೊಡಬೇಕು ಎಂಬುದರ ಬಗ್ಗೆ ನಿಯಮಾವಳಿ ರಚಿಸಿಕೊಂಡು ಅದರಂತೆ ನೀಡುವಲ್ಲಿ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ್ದೇ ಅಂತಿಮ ತೀರ್ಮಾನ" ಎಂದೂ ಸಮಿತಿ ತಿಳಿಸಿದೆ.

ಈ ದತ್ತಿನಿಧಿಗೆ, ಡಾ॥ ಶಂ. ಬಾ. ಜೋಶಿ ಅವರ ಮಕ್ಕಳು ಡಾ॥ ಮಧುಸೂದನ ಜೋಶಿ ಅವರು 3000 ರೂಪಾಯಿಗಳನ್ನು ಸೇರಿಸಿ, ಡಾ॥ ಶಂ.ಬಾ. ಜೋಶಿಯವರಿಗೆ ಪ್ರಿಯವಾದ "ವೈವಸ್ವತಮನು ಪ್ರಣೀತ ಮಾನವ ಧರ್ಮದ ಬಗೆಗೆ ಹೆಚ್ಚಿನ ಸಂಶೋಧನ ಹಾಗೂ ಈ ಮಾನವಧರ್ಮದ ಬಗೆಗಿನ ತಿಳಿವಳಿಕೆ ಹೆಚ್ಚಿಸುವ ವಿಚಾರಪ್ರಚಾರಕ್ಕಾಗಿ ಮೇಲಣ ದತ್ತಿಯ ಮೂಲಕ ಕಾರ್ಯವು ಮುಂದುವರಿಯಲಿ" ಎಂದು ಆಶಿಸಿದ್ದಾರೆ.

ಮೇಲೆ ಉಲ್ಲೇಖಿಸಿರುವ ದತ್ತಿನಿಧಿಗಳ ನೆರವಿನಿಂದ 1984ರ ಕಾರ್ಯ ಕ್ರಮವಾಗಿ ಹಾಗೂ ಡಾ॥ ಶಂ. ಬಾ. ಜೋಶಿಯವರ ಅಪೇಕ್ಷೆಯಂತೆ, "ವೈವಸ್ವತ ಮನು"ವಿನ ವಿಷಯವಾಗಿ ಪ್ರತಿಷ್ಠಾನದ ಕೋರಿಕೆಯನ್ನು ಮನ್ನಿಸಿ ಪ್ರೊ॥ ಎಸ್. ಕೆ. ರಾಮಚಂದ್ರರಾವ್ ಅವರು 1984, ಆಗಸ್ಟ್ 11ರಂದು ವೈದುಷ್ಯಪೂರ್ಣವಾದ ಉಪನ್ಯಾಸವನ್ನು ನೀಡಿದ್ದಲ್ಲದೆ. ಪ್ರಕಟನೆಗಾಗಿ ಉಪ ನ್ಯಾಸದ ಲಿಖಿತರೂಪವನ್ನು ಒದಗಿಸಿ ಉಪಕಾರಮಾಡಿದರು. ಈ ಉಪನ್ಯಾಸ ವನ್ನು ಪ್ರತಿಷ್ಠಾನದ ವಿದ್ವತ್‌ಪತ್ರಿಕೆಯಾದ "ಲೋಚನ" (ಸಂ. ೨-೨, ಡಿಸೆಂಬರ್ ೧೯೮೪) ದಲ್ಲಿ ಪ್ರಕಟಿಸಿರುವುದಲ್ಲದೆ, ಪುಸ್ತಕರೂಪದಲ್ಲಿಯೂ ಓದುಗರ ಕೈಯಲ್ಲಿ ಇಡಲು ಸಂತೋಷವೆನಿಸಿದೆ.

ವೈವಸ್ವತ ಮನು ವಿಚಾರದಲ್ಲಿ ಡಾ॥ ಶಂ. ಬಾ. ಜೋಶಿಯವರ ವಾದ ಸರಣಿಗೂ ಪ್ರೊ॥ ರಾಮಚಂದ್ರರಾಯರು ವೈದಿಕಗ್ರಂಥಗಳ ಆಧಾರ ಹಿಡಿದು ನಮ್ಮ ಮುಂದಿಟ್ಟಿರುವ ವಿಚಾರಸರಣಿಗೂ ಅನೇಕ ಅಂಶಗಳಲ್ಲಿ ಹೊಂದಿಕೆ ಕೂಡುವುದಿಲ್ಲ. ಈ ಬಗೆಗೆ ಸವಿವರವಾಗಿ ಇಲ್ಲಿ ಪ್ರಸ್ತಾವಿಸುವ ಅಗತ್ಯವಿಲ್ಲ. ವಾದ, ಚರ್ಚೆ ನಡೆಯಬೇಕೆಂಬುದೇ ಶಂಬಾ ಅವರ ಅಪೇಕ್ಷೆ. "ವಾದೇ ವಾದೇ ಜಾಯತೇ ತತ್ತ್ವಬೋಧಃ." ಈ ವಿಷಯದಲ್ಲಿ ಈ ಕಿರುಹೊತ್ತಿಗೆ ಯಿಂದ ವಿಚಾರಪ್ರಚೋದನೆ ಆಗಿ ಜಿಜ್ಞಾಸೆ ಮುಂದುವರಿದರೆ ನಿಧಿಗಳನ್ನು ಸ್ಥಾಪಿಸಿದವರ ಉದ್ದೇಶ ಸಫಲವಾಗುವುದು.

ಕೊನೆಯಲ್ಲಿ ದತ್ತಿನಿಧಿಗಳನ್ನು ಕೊಡಮಾಡಿ ಡಾ॥ ಶಂ. ಬಾ. ಜೋಶಿ ಅವರ ಗೌರವಾರ್ಥ ಪ್ರತಿವರ್ಷ ಈ ವಿಷಯ ಮಾತ್ರವಲ್ಲ, ಶಂಬಾ ಅವರಿಗೆ ಪ್ರಿಯವಾದ ಭಾಷಾ ಸಂಸ್ಕೃತಿ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆಯೂ ಬೆಲೆ ಯುಳ್ಳ ಉಪನ್ಯಾಸಗಳು ನಡೆದು ನಾಡಿನಲ್ಲಿ ವೈಚಾರಿಕತೆ ಬೆಳೆಯಲಿ ಎಂದು ನಮ್ಮ ಹಾರೈಕೆ.

೧೫-೨-೧೯೮೫
ಬೆಂಗಳೂರು-೧೯.

ಎಂ. ವಿ. ಸೀತಾರಾಮಯ್ಯ
ಅಧ್ಯಯನ ನಿರ್ದೇಶಕ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ವೈವಸ್ವತ ಮನು*

(ಡಾ॥ ಶಂ. ಬಾ. ಜೋಶಿ ದತ್ತಿ ಉಪನ್ಯಾಸ–೧೯೮೪)

ಉಪನ್ಯಾಸಕರು : ವಿದ್ಯಾಲಂಕಾರ ಪ್ರೊ॥ ಸಾ. ಕೃ. ರಾಮಚಂದ್ರರಾವ್

(೧)

ನಾಡಿನ ಧೀಮಂತ ಸಾಹಿತಿಗಳಾದ ಡಾ॥ ಶಂ. ಬಾ. ಜೋಶಿಯವರು ತಮ್ಮ ಆಳವಾದ, ಎಡೆಬಿಡದ ಸಂಶೋಧನೆಯ ಫಲವಾಗಿ ಪ್ರತಿಪಾದಿಸುತ್ತ ಬಂದಿರುವ ಒಂದು ವಾದ ವೈವಸ್ವತ ಮನುವನ್ನು ಕುರಿತದ್ದು. ಇದು ತುಂಬ ಮುಖ್ಯವಾದ ವಿಚಾರವೆಂದು ಅವರ ವಿಶ್ವಾಸ. ಮನುಸಂಪ್ರದಾಯವನ್ನು ಕುರಿತಂತೆ ಅವರ ವಾದವನ್ನು ಪರಿಶೀಲಿಸಿ, ನನ್ನ ಶೋಧದಲ್ಲಿ ದೊರೆತ ಮತ್ತೆ ಕೆಲವು ವಿವರಗಳನ್ನು ಕಾಣಿಸುವುದು ಈಗ ನಾನು ಕೈಗೊಳ್ಳುವ ಕೆಲಸ. ಇದರಲ್ಲಿ ನನಗೆ ಅಧಿಕಾರವಿದೆಯೆಂಬ ನಂಬಿಕೆ ನನಗಿಲ್ಲ. ಆದರೆ ನಾನು ಈ ಕೆಲಸ ಮಾಡಬೇಕೆಂದು ಡಾ॥ ಜೋಶಿಯವರದ್ದೇ ಆಣತಿ. ಅವರಲ್ಲಿ ನನಗೆ ವಿಶೇಷವಾದ ಗೌರವಬುದ್ಧಿಯಿರುವುದರಿಂದಲೂ, ಅವರ ಸಂಶೋಧನೆ ದಿಟವಾಗಿ ಮೌಲಿಕವಾದುದೆಂಬ ಅರಿವು ನನಗಿರುವುದರಿಂದಲೂ ಅವರ ಕರೆಗೆ ಓಗೊಟ್ಟು ನಿಮ್ಮೆದುರು ನಿಂತಿದ್ದೇನೆ, ಅಷ್ಟೆ. ಸಾಹಸವೆಂದಾದರೆ ಮನ್ನಿಸಬೇಕು.

ಮೊದಲಲ್ಲೇ ಅರಿಕೆಮಾಡಿಕೊಳ್ಳಬೇಕಾದದ್ದಿದೆ. ಅವರ ವಾದಗಳನ್ನೆಲ್ಲಾ ನಾನು ಒಪ್ಪುವುದಿಲ್ಲ; ಅವರು ಕಾಣಿಸಿರುವ ಹಲವಾರು ವಿವರಗಳಿಗೆ ಅವರು ಹೇಳುವಂಥ ವಿವರಣೆ ನನಗೆ ಸರಿದೋರುವುದಿಲ್ಲ. ಮೇಲಾಗಿ, ವ್ಯಾಸಾದಿ ಋಷಿಗಳನ್ನೂ ಭಗವದ್ಗೀತೆಯಂಥ ಗ್ರಂಥಗಳನ್ನೂ ಡಾ॥ ಜೋಶಿಯವರು ಕಂಡ ಕಣ್ಣಿನಿಂದ ನಾನು ಕಾಣಲಾರೆ. ಆ ವಿಚಾರವಾಗಿ ಆದರ, ಗೌರವ, ಶ್ರದ್ಧೆಗಳನ್ನು ಇರಿಸಿಕೊಂಡವನು ನಾನು. ಹೀಗಾಗಿ ಅವರ ವಾದದ ಎಲ್ಲ ವಿವರಗಳನ್ನೂ ಇಲ್ಲಿ ನಾನು ಪರಿಶೀಲಿಸಲಾರೆ. ಕೆಲವು ವಿವರಗಳನ್ನು ಬೇಕೆಂದೇ ಕೈಬಿಡುತ್ತೇನೆ. ಪೂರ್ವಗ್ರಹಪೀಡಿತನೆಂದಾದರೂ ನಾನು ಕೆಲವು ವಿಚಾರಗಳಿಗೆ ಕೈಹಾಕಬಾರದು! ಆದ್ದರಿಂದ ಅವರ ವಾದದ ಸಂಪೂರ್ಣ ಪರಾಮರ್ಶೆಯನ್ನು ತಾವು ನನ್ನಿಂದ ನಿರೀಕ್ಷಿಸಲಾಗದು.

---

* 11–8–1984ರಂದು ಮಾಡಿದ ಡಾ॥ ಶಂ. ಬಾ. ಜೋಶಿ ಗೌರವಾರ್ಥ ಉಪನ್ಯಾಸ.

ಪರಾಮರ್ಶೆಗಿಂತ ಹೆಚ್ಚಾಗಿ, ಅಧ್ಯಯನಕ್ಕೆ ನೆರವಾಗುವ ಕೆಲವು ವಿವರಗಳನ್ನು ತಮ್ಮ ಮುಂದಿರಿಸುವುದು ನನ್ನ ಉದ್ದೇಶ.

ಸಂಗ್ರಹವಾಗಿ ಅವರ ವಾದ ಹೀಗಿದೆ: ಹಿಂದೊಮ್ಮೆ ನಮ್ಮ ದೇಶದಲ್ಲಿ ವೈವಸ್ವತ ಮನು ಪ್ರಣೀತವಾದ ಮಾನವಧರ್ಮ ಜೀವಂತವಾಗಿದ್ದಿತು. ಭಾರತೀಯ ಪುರಾತನರು ಪ್ರಜ್ಞಾನೇತ್ರದಿಂದ ಕಂಡು ಆಚರಿಸಿದ ಆ ಧರ್ಮವೇ ದಿಟವಾದ ಧರ್ಮ. ಆದರೆ ಮುಂದೆ ಎಂದೋ ಸ್ವಾಯಂಭುವ ಮನು ಪ್ರಣೀತವಾದ ನರಧರ್ಮ ಅದನ್ನು ಮೆಟ್ಟಿ, ಹಿಮ್ಮೆಟ್ಟಿಸಿ ತಾನು ಬಲಗೊಂಡಿತು. ಹಿಂದೆ ಇದ್ದುದು (ಮಾನವ ಧರ್ಮ) ಇಡೀ ಸಮಾಜದ ಸಮಷ್ಟಿಯ ನೆಲೆಯಲ್ಲಿ ಮೈದಳೆದದ್ದು; ಈಗ ಇರುವುದು (ನರಧರ್ಮ) ಜಾತಿ, ಮತ, ಪಂಥ, ಮುಂತಾಗಿ ಒಡಕುಗಳುಳ್ಳದ್ದು. ವೈವಸ್ವತ ಸಂಪ್ರದಾಯ ಸೂರ್ಯಸಂಬಂಧಿಯಾದುದು; ಅದರದ್ದು ಪ್ರಕಾಶತತ್ತ್ವ. ಸ್ವಾಯಂಭುವ ಸಂಪ್ರದಾಯ ಚಂದ್ರಸಂಬಂಧಿಯಾದುದು; ಕತ್ತಲೆ ಅದರ ತತ್ತ್ವ. ಹೀಗೆ ನಮ್ಮ ದೇಶದಲ್ಲಿ ಎರಡು ಮನು ಸಂಪ್ರದಾಯಗಳ ಹೋರಾಟ ನಡೆದಿದೆ. ಚಂದ್ರನನ್ನೇ ಸೂರ್ಯನೆಂದು ಕತ್ತಲೆಯನ್ನೇ ಬೆಳಕೆಂದು ತೋರಿಸುವ, ನಂಬಿಸುವ ಮೋಸವು ನಡೆದಿದೆ. ವ್ಯಾಸಾದಿ ಋಷಿಗಳೂ, ಭಗವದ್ಗೀತೆಯೇ ಮೊದಲಾದ ಗ್ರಂಥಗಳೂ ಹೂಡಿರುವ ತಂತ್ರ, ಮಾಟ, ಮೋಸ ಇದು.

ಈ ವಾದದಲ್ಲಿ ಹಲವು ವಿವರಗಳಿವೆ. ಮುಖ್ಯವಾಗಿ ಸಂಪ್ರದಾಯಗಳ ಸ್ವರೂಪ, ಸಂಪ್ರದಾಯಗಳಲ್ಲಿ ಸೆಣಸಾಟ, ಧರ್ಮದ ಸೋಗಿನಲ್ಲಿ ನಡೆದಿರುವ "ಮೋಸ" ಇವು. ಮೊದಲೇ ನಾನು ತಮ್ಮಲ್ಲಿ ಅರಿಕೆ ಮಾಡಿಕೊಂಡಂತೆ, "ಮೋಸ"ದ ವಿವರವನ್ನು ಇಲ್ಲಿ ನಾನೆತ್ತಿಕೊಳ್ಳುವುದಿಲ್ಲ; ಕಾರಣವನ್ನು ಮೊದಲೇ ಹೇಳಿದ್ದೇನೆ. ಸಂಪ್ರದಾಯಗಳಲ್ಲಿ ಇದ್ದಿರಬಹುದಾದ ಸೆಣಸಾಟವೂ ಅಷ್ಟಾಗಿ ಇಲ್ಲಿ ನನ್ನ ಪರಿಶೀಲನೆಗೆ ಬರಲಾರದು. ಸೆಣಸಾಟವಿರುವುದು ದಿಟವಾದರೂ, ಡಾ॥ ಜೋಶಿಯವರು ಹೇಳಿದಂತೆ, ಈ ಎರಡು ಮನುಸಂಪ್ರದಾಯಗಳಲ್ಲಿ ಸೆಣಸಾಟವಿದೆಯೆಂದು ನನಗನಿಸುವುದಿಲ್ಲ. ಭಾರತದ ಧಾರ್ಮಿಕ ಪರಂಪರೆಯಲ್ಲಿ ಸೆಣಸಾಟವಿದ್ದುದು ವೈದಿಕ, ತಾಂತ್ರಿಕ ಚೌಕಟ್ಟುಗಳಲ್ಲಿ ಎಂದು ನನ್ನ ನಂಬಿಕೆ. ಇದನ್ನು ಬೇರೆಡೆ ವಿಸ್ತಾರವಾಗಿ ಕಾಣಿಸಿದ್ದೇನೆ. ಆದ್ದರಿಂದ ಇಲ್ಲಿ ಅದನ್ನು ವಿಶೇಷವಾಗಿ ಎತ್ತಿಕೊಳ್ಳುವ ಉದ್ದೇಶ ನನಗಿಲ್ಲ.

ಇನ್ನು ಉಳಿದದ್ದು ಸಂಪ್ರದಾಯಗಳ ಸ್ವರೂಪ. ಇದೇ ನನ್ನ ಇಂದಿನ ನಿರೂಪಣೆಯ ಮುಖ್ಯ ಸಾಮಗ್ರಿಯೆನ್ನಬಹುದು. ವೈವಸ್ವತ ಮನುವಿನ ಹೆಗ್ಗಳಿಕೆಯ

ವಿಚಾರವಾಗಿ, ಜಾತಿ–ಮತ–ಪಂಥಗಳ ಒಡಕಿಲ್ಲದ ವಿಶಾಲ ಸಮಾಜ–ಸಮಷ್ಟಿಯು 'ಮಾನವ ಧರ್ಮ'ದ ಅಗತ್ಯದ ವಿಚಾರವಾಗಿ ಡಾ॥ ಶಂ.ಬಾ. ಜೋಶಿಯವರೊಂದಿಗೆ ನನ್ನ ಒಮ್ಮತವಿದೆ. "ಭಾರತದಿಂದ ಜಾಗತಿಕ ಧರ್ಮಕ್ಕೆ ಮಾನವ ಸಂಸ್ಕೃತಿಗೆ ಪ್ರಗತಿ ಪರ, ಉದಾತ್ತ ಭವ್ಯರೂಪದ ಆದರ್ಶವು ಏನಾದರೂ ದೊರೆತಿದ್ದರೆ" ಅದು ಮನು ವೈವಸ್ವತನಿಂದ ದೊರೆತ "ವೈಶ್ವಿಕ ಪಾತಳಿ" (ಹಿಂದೂ ಎಂಬ ಧರ್ಮ, ಪು. XX) ; "ಮನು ವೈವಸ್ವತನಿಂದಲೇ ಮಾನವಧರ್ಮ=ಸಂಸ್ಕೃತಿ ಪ್ರಾರಂಭವಾಗಿದೆ ; ಭಾಷೆ–ಸಂಸ್ಕೃತಿಯನ್ನು ಪ್ರೇರಿಸಿರುವ ಈ ಮನುವಿಗೆ ನಾವು ಎಷ್ಟು ಕೃತಜ್ಞರಿದ್ದರೂ ಕಡಿಮೆ" (ಬುಧನ ಜಾತಕ, ಪು. 79). "ಭಾರತೀಯರಿಗೆ ತಾವು 'ಮಾನವ ಧರ್ಮ'ದ ಉಜ್ವಲ ಪೂರ್ವಪರಂಪರೆಯ ಉತ್ತರಾಧಿಕಾರಿಗಳು, ಎಂಬ ಪ್ರಜ್ಞೆ ಕಿಂಚಿತ್ತಾಗಿ ಉಳಿದಿದ್ದರೂ ಕೂಡ ನಮ್ಮ ರಾಷ್ಟ್ರವು ಇಂದಿನಂತಹ ಕ್ಷುದ್ರ, ಸಂಕುಚಿತ ಜಾತಿ, ಮತ, ಪಂಥಗಳ ವೈಶಿಷ್ಟ್ಯದ ಕೊಳಚೆಯ ಹೊಂಡಗಳಲ್ಲಿ ಹೊರಳಾಡುತ್ತಿರುವ ಶಕ್ಯತೆಯು ನಿಶ್ಚಿತವಾಗಿಯೂ ತಪ್ಪಬಹುದಾಗಿತ್ತು" (ಮಾನವ ಧರ್ಮದ ಆಕೃತಿ, ಪು. 37) ಎಂಬ ಅವರ ಮಾತುಗಳನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ. ಈ ಮಾತುಗಳನ್ನು ಓದಿಯೇ ಡಾ॥ ಜೋಶಿಯವರ ಸಂಶೋಧನೆಯ ಹಿಂದಿರುವ ಉದಾತ್ತವಾದ ದೃಷ್ಟಿಯನ್ನೂ ಆದರ್ಶದ ನಿಷ್ಠೆಯನ್ನೂ ಅರಿತುಕೊಂಡು, ಅವರ ವಿಚಾರವಾಗಿ ಗೌರವ ಬುದ್ಧಿಯನ್ನು ಬೆಳೆಸಿಕೊಂಡಿದ್ದೇನೆ ಎಂಬುದನ್ನೂ ನಾನು ಇಲ್ಲಿ ಹೇಳಬೇಕು.

(೨)

ವೈವಸ್ವತ ಮನುವಿನತ್ತ ಡಾ॥ ಜೋಶಿಯವರ ಗಮನ ಹರಿದದ್ದು ಮೂರು ನಿಟ್ಟುಗಳಿಂದ ಎಂದು ತೋರುತ್ತದೆ — ಭಗವದ್ಗೀತೆಯಲ್ಲಿ ಬರುವ 'ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನ್ ಅಹಂ' (4, 1) ಎಂಬ ಉಲ್ಲೇಖ ; ಕಾಳಿದಾಸನ 'ರಘುವಂಶ' ಮಹಾಕಾವ್ಯದಲ್ಲಿ ಬರುವ 'ವೈವಸ್ವತೋ ಮನುರ್ನಾಮ ಮಾನವೀಯೋ ಮನೀಷಿಣಾಂ' (1, 11) ಎನ್ನುವ ಪ್ರಸ್ತಾಪ ; ಮತ್ತು ನಮ್ಮವರು ಸಂಕಲ್ಪಮಾಡುವಾಗ ದೇಶಕಾಲ ಸಂಕೀರ್ತನೆಯ ಸಂದರ್ಭದಲ್ಲಿ "ವೈವಸ್ವತ ಮನ್ವಂತರೇ" ಎಂದು ಮಾಡುವ ಒಕ್ಕಣೆ.

ಸಂಕಲ್ಪದ ವಿಚಾರ ಮೊದಲು ಎತ್ತಿಕೊಳ್ಳೋಣ. ಸಂಕಲ್ಪದ ಒಕ್ಕಣೆಯಿಂದ ಈಗ ಭಾರತದಲ್ಲಿ ವೈವಸ್ವತನೆಂಬ ಮನು ಆಳುತ್ತಿರುವ ಕಾಲ (ಮನ್ವಂತರ) ಪ್ರಚಲಿತವಾಗಿದೆಯೆಂದು ತಿಳಿದುಬರುತ್ತದೆ. ಎಂದರೆ ವಿವಸ್ವನ್ ಪ್ರೇರಿತ 'ಮಾನವ

ಧರ್ಮ'ವೇ ಇರಬೇಕಾಗಿದ್ದಿತು. ಹೀಗಿರದೆ 'ಹಿರಣ್ಯಗರ್ಭ ದೈವತ ಪ್ರೇರಣೆಯ ನರ-ನಾರಾಯಣ ಸಂಪ್ರದಾಯವು' ಪ್ರಭಾವಶಾಲಿಯಾಗಿದೆಯೆಂದು ಡಾ॥ ಜೋಶಿ ಅವರ ಕಳವಳ. ಇದನ್ನು ಸ್ವಲ್ಪ ಪರಿಶೀಲಿಸೋಣ. ಈಗ ನಾವು ಮಾಡುವ ಸಂಕ್ಷಿಪ್ತ ಸಂಕಲ್ಪದ ಮೂಲ 'ಮಹಾಸಂಕಲ್ಪ'ವೆನಿಸಿಕೊಳ್ಳುತ್ತದೆ. ಸಂಕಲ್ಪದ ಉದ್ದೇಶ ವ್ಯಕ್ತಿಯು ತಾನು ಬದುಕಿರುವ ಕಾಲಭಾಗವನ್ನೂ, ವಾಸಮಾಡುತ್ತಿರುವ ಭೂಭಾಗಪ್ರದೇಶವನ್ನೂ ಗುರುತಿಸಿ ತಾನು ಕೈಗೊಂಡಿರುವ ಧಾರ್ಮಿಕ ಕ್ರಿಯೆಯ ಚೌಕಟ್ಟನ್ನು ನಿರ್ಧರಿಸುವುದು. ಕಾಲವನ್ನು ಗುರುತಿಸುವಾಗ ಯುಗ, ವರ್ತಮಾನ-ಸಂವತ್ಸರ, ಮಾಸ, ತಿಥಿಗಳಿಗೆ ಹಿನ್ನೆಲೆಯಾಗಿ 'ವೈವಸ್ವತ ಮನ್ವಂತರದಲ್ಲಿ' ಎನ್ನುವ ವಿವರ ಬರುತ್ತದೆ. ಈ ಮನ್ವಂತರವನ್ನೂ ಗುರುತಿಸಬೇಕಲ್ಲ? ಅದಕ್ಕಾಗಿ 'ಮಹಾಸಂಕಲ್ಪ'ದಲ್ಲಿ "ಚತುರ್ದಶ ಮನ್ವಂತರಾಣಾಂ ಮಧ್ಯೇ ಸಪ್ತಮೇ ವೈವಸ್ವತ ಮನ್ವಂತರೇ" ಎನ್ನುವ ವಿವರವಿದೆ ; ಆ ಹದಿನಾಲ್ಕು ಮನ್ವಂತರಗಳ ಹೆಸರುಗಳಿಗೆ ಕಾರಣರಾದ ಹದಿನಾಲ್ಕು ಮನುಗಳ ಉಲ್ಲೇಖವೂ ಇದೆ. ಈ ಪಟ್ಟಿ 'ಸ್ವಾಯಂಭುವ' ನೆಂಬ ಮನುವಿನಿಂದ ಮೊದಲಾಗುತ್ತದೆ.

ಈ ಹದಿನಾಲ್ಕು ಮನ್ವಂತರಗಳು 'ಶ್ವೇತವರಾಹ ಕಲ್ಪ'ಕ್ಕೆ ಸೇರಿದವು. ಈ ಕಲ್ಪವು ಏಳು ಕಲ್ಪಗಳಲ್ಲೊಂದು. ಕಲ್ಪಗಳಿಗೆ ಚೌಕಟ್ಟೇನು? 'ಮಹಾಸಂಕಲ್ಪ'ದ ಪ್ರಕಾರ, ಆದ್ಯ ಬ್ರಹ್ಮನ ಎರಡನೆಯ ಪರಾರ್ಧದಲ್ಲಿ ಮೊದಲ ವರ್ಷ, ಮೊದಲ ಮಾಸ, ಮೊದಲ ಪಕ್ಷ, ಮೊದಲ ದಿವಸ ನಡೆಯುತ್ತಿರುವಾಗ, ಅದರ ಎರಡನೆಯ ಯಾಮ, ಮೂರನೆಯ ಮುಹೂರ್ತದಲ್ಲಿ ಹದಿನಾಲ್ಕನೆಯ ಗಂಟೆ ಇರುವಾಗ, ಈ ಏಳೂ ಕಲ್ಪಗಳೂ ನಡೆದುಹೋಗುತ್ತವೆ! ನಮ್ಮ ಪ್ರಾಚೀನರು ಕಾಲಗಣನೆಯಲ್ಲಿ ಅಪಾರ ಅಸಂಖ್ಯ ಅದ್ಭುತ ಎಂಬ ಕಲ್ಪನೆಗೆ ರೂಪ ಕೊಟ್ಟಿದ್ದಾರೆ. ಇದನ್ನು ಸ್ವಲ್ಪ ನೋಡಿ. 'ಮನ್ವಂತರ'ವೆಂದರೆ ಮನು ಒದಗುವ ಅವಧಿ ('ಮನೋಃ ಅಂತರಂ ಅಸ್ಮಿನ್'). ಮನುಗಳ ವಿಚಾರ ಮುಂದೆ ನೋಡೋಣ. ಈಗ, ಮನ್ವಂತರಗಳು ಹದಿನಾಲ್ಕು ಎಂದು ಕಾಲಗಣನೆಯ ದೃಷ್ಟಿಯಿಂದ ನಿಶ್ಚಯ ಮಾಡಿದರು. ಬ್ರಹ್ಮನ ಹಗಲನ್ನು ಹದಿನಾಲ್ಕು ಭಾಗಮಾಡಿ, ಒಂದೊಂದು ಭಾಗವನ್ನೂ ಮನ್ವಂತರವೆಂದರು.

ಈಗ ನಾವಿರುವುದು ಕಲಿಯುಗ. ನಾಲ್ಕು ಯುಗಗಳಲ್ಲಿ ಕೃತ (ಸತ್ಯ), ತ್ರೇತಾ, ದ್ವಾಪರ, ಎಂಬ ಮೂರು ಯುಗಗಳು ಕಳೆದು ಈಗ ಕಲಿಯುಗದಲ್ಲೂ

5085 ವರ್ಷಗಳು ಕಳೆದಿವೆ. ಎಂದರೆ ಅದರ ಪ್ರಥಮ ಪಾದ. ಕಲಿಯುಗಕ್ಕೆ ಒಟ್ಟು 4,32,000 ವರ್ಷಗಳು (ಮನುಷ್ಯಮಾನದಿಂದ). ನಾಲ್ಕೂ ಯುಗಗಳನ್ನು ಕೂಡಿದರೆ ಒಂದು ಮಹಾಯುಗ; ಮನುಷ್ಯಮಾನದಿಂದ 4,3,20,000 ವರ್ಷಗಳು, ದೇವಮಾನದಿಂದ 12,000 ವರ್ಷಗಳು. ಇಂಥಾ ಮಹಾಯುಗಗಳು ಒಂದು ಸಾವಿರವಾದರೆ ಒಂದು ಕಲ್ಪವೆನಿಸಿಕೊಳ್ಳುತ್ತದೆ. ಕಲ್ಪವೇಂದರೆ ಬ್ರಹ್ಮನ ಒಂದು ಹಗಲು. 7,00,00,000 ವರ್ಷಗಳು. ಬ್ರಹ್ಮನಿಗೆ ನೂರು ವರ್ಷ ಆಯುಸ್ಸೆಂದರೆ 25,60,000 ಮಹಾಯುಗಗಳು ಕಳೆಯುತ್ತವೆ! ಬ್ರಹ್ಮನೂ ಶಾಶ್ವತನಾದವ ನೇನಲ್ಲ. ಈಗಿರುವವನು ಮೊದಲ ಬ್ರಹ್ಮನಷ್ಟೇ; ಇನ್ನೂ ಅನೇಕ ಬ್ರಹ್ಮರು ಬರುವವರಿದ್ದಾರೆ!

ಇರಲಿ. ಬ್ರಹ್ಮನ ಒಂದು ಹಗಲಿನ ನಡುವೆ ('ಬ್ರಹ್ಮಣಃ ದಿನಮಧ್ಯೇ') ಹದಿನಾಲ್ಕು ಮನ್ವಂತರಗಳು ನಡೆದುಹೋಗುತ್ತವೆ. ದೇವಮಾನದಿಂದ ಎಪ್ಪ-ತ್ತೊಂದು ಮಹಾಯುಗಗಳು ಕೂಡಿ ಒಂದು ಮನ್ವಂತರವೆಂದು ಅಮರಕೋಶಕಾರನ ಒಕ್ಕಣೆ (1, 4, 22). ಬ್ರಹ್ಮನ ಒಂದು ಹಗಲು ಮನುಷ್ಯರಿಗೆ ಒಂದು ಕಲ್ಪ; ಇದರಲ್ಲಿ ಹದಿನಾಲ್ಕೂ ಮನ್ವಂತರಗಳು ಮುಗಿಯಬೇಕು. ಲಿಂಗಪುರಾಣದ ಎಣಿಕೆ ಯಂತೆ ಒಂದು ಮನ್ವಂತರವೆಂದರೆ 306,820,000 ವರ್ಷಗಳು. ಈಗ ಆರು ಮನ್ವಂತರಗಳು ಮುಗಿದು ಏಳನೆಯ ಮನ್ವಂತರದಲ್ಲಿ ನಾವಿದ್ದೇವೆ; ಮುಂದೆ ಇನ್ನೂ ಏಳು ಮನ್ವಂತರಗಳು ಕಳೆದನಂತರ, ಬ್ರಹ್ಮನ ಒಂದು ಹಗಲು ಮುಗಿದು ಸಂಜೆ ಯಾಗುತ್ತದೆ.

ಇದನ್ನು ಪ್ರಸ್ತಾಪಮಾಡುವ ಉದ್ದೇಶವೇನೆಂದರೆ ನಮ್ಮ ಕಾಲಗತಿಯ ಸ್ವರೂಪ ವನ್ನು ತಿಳಿಸುವುದು. ಮನ್ವಂತರವೆಂದರೆ ವಿಶಾಲಕಾಲದ ಒಂದು ಸೂಕ್ಷ್ಮಭಾಗ; ಮನುಷ್ಯರ ಎಣಿಕೆಯಲ್ಲಿ ಮಾತ್ರ ಅದು ಕಲ್ಪನೆಗೂ ನಿಲುಕದಿರುವಷ್ಟು ದೊಡ್ಡ ಅವಧಿ. ಈಗಾಗಲೇ ಆರು ಮನ್ವಂತರಗಳು ಕಳೆದಿವೆಯೆಂದರೆ, ಭೂಮಿಯ ಹುಟ್ಟು, ಅದರ ಮೇಲೆ ಜೀವದ ಅವತಾರ, ಜೀವದ ವಿಕಾಸಕ್ರಮದಲ್ಲಿ ಮನುಷ್ಯನ ಪ್ರಾದುರ್ಭಾವ, ಪ್ರಾದುರ್ಭಾವವಾದಮೇಲೆ ಇತಿಹಾಸ ಗುರುತಿಸಬಲ್ಲ ಅವಧಿ ಇವೆಲ್ಲ ವನ್ನೂ ನಾವು ಊಹಿಸಿಕೊಳ್ಳುವುದಾದರೆ ಊಹಿಸಿಕೊಳ್ಳಬಹುದು!

ಒಂದೊಂದು ಮನ್ವಂತರಕ್ಕೂ ಒಬ್ಬೊಬ್ಬ ಮನುವನ್ನು ಹೇಳುತ್ತಾರೆ. ಕಾಲಿಕಾ ಪುರಾಣದಲ್ಲಿ 'ಮನ್ವಂತರಂ ಮನೋಃ ಕಾಲಃ ಯಾವತ್ ಪಾಲಯತೇ

ಪ್ರಜಾಃ । ಏಕೋ ಮನುಃ ಸಕಾಲಸ್ತು ಮನ್ವಂತರಮಿತಿ ಶ್ರುತಂ ॥' ಎನ್ನುವ ಮಾತಿದೆ. ಎಂದರೆ, ಯಾವ ಅವಧಿಯಲ್ಲಿ ಒಬ್ಬ ಮನು ಅಧಿಕಾರಿಯಾಗಿ ಪ್ರಜೆಗಳನ್ನು ಪಾಲಿಸುವನೋ ಅದು ಒಂದು ಮನ್ವಂತರ. ಹದಿನಾಲ್ಕು ಮನುಗಳೆಂಬ ಎಣಿಕೆ ಹದಿನಾಲ್ಕು ಮನ್ವಂತರಗಳೆನ್ನುವ ಗಣನೆಯನ್ನು ಅನುಸರಿಸಿದ್ದು. ಮನ್ವಂತರಗಳು ಹದಿನಾಲ್ಕೆಂಬ ಗಣನೆ ಸರ್ವಸಮ್ಮತವಾದದ್ದು. ಆದರೆ ಮನುಗಳ ಸಂಖ್ಯೆ ಹದಿನಾಲ್ಕೆನ್ನುವುದು ಭಾಗವತ (8, 1), ವಾಯುಪುರಾಣ (26, 32, 46), ಪದ್ಮಪುರಾಣ (5, 7, 81–115) ಗಳಲ್ಲಿ ಬರುವ ಎಣಿಕೆಯಾದರೆ ಹನ್ನೆರಡೆಂದು ವಿಷ್ಣುಪುರಾಣ (3, 1, 6), ಬ್ರಹ್ಮಾಂಡ ಪುರಾಣ (2, 36, 3–5) ಗಳಲ್ಲಿ ಬರುತ್ತದೆ. ಹದಿನಾಲ್ಕೆಂದೇ ಎಣಿಸುವುದು ಕುಮಾರಿಲಭಟ್ಟರ ಕಾಲದಿಂದ (ಎಂದರೆ ಕ್ರಿಸ್ತಾಬ್ದ ಆರನೆಯ ಶತಮಾನದಿಂದ) ವಾಡಿಕೆಯಾಗಿದೆ.

(೩)

ಇದು ಹೇಗಾದರೂ ಇರಲಿ, ಮನುವಿಗೂ ಮನ್ವಂತರಕ್ಕೂ ಸಂಬಂಧ ವೇನು? ಒಂದೊಂದು ಮನ್ವಂತರದಲ್ಲಿ ಒಬ್ಬೊಬ್ಬ ಮನು ಪ್ರಜೆಗಳನ್ನು ಆಳುವನೆಂಬುದನ್ನು ಈಗಾಗಲೇ ಉಲ್ಲೇಖಿಸಿದೆ. ಆಳುವುದರಿಂದ ಅವನು 'ರಾಜ' ಅಷ್ಟೇ: ಮನುಗಳ ವರ್ಣನೆ ಪುರಾಣಗಳಲ್ಲಿ ಬರುವಾಗ ಅವರ ರಾಜ್ಯ–ರಾಜಧಾನಿ, ಮಂತ್ರಿ–ಪರಿವಾರಗಳ ಉಲ್ಲೇಖವಿಲ್ಲ; ಒಂದೊಂದು ಮನ್ವಂತರದಲ್ಲೂ ಇಂದ್ರಾದಿ ದೇವತೆಗಳು, ಭಗವದವತಾರ, ಸಪ್ತರ್ಷಿಗಳು, ಮನುಪುತ್ರರು, ಮನುವಿನ ಉಗಮ, ಇಷ್ಟು ಮಾತ್ರ ವಿವರಗಳು ಬರುತ್ತವೆ. ಪ್ರಜೆಗಳನ್ನು ತಮ್ಮ ತಮ್ಮ ಕರ್ಮಗಳಲ್ಲಿ ತೊಡಗಿಸುವುದು ಸ್ಮೃತಿ. ಕುಮಾರಿಲ ಭಟ್ಟರು ತಮ್ಮ 'ತಂತ್ರವಾರ್ತಿಕ' ದಲ್ಲಿ ಹದಿನಾಲ್ಕು ಮನುಗಳನ್ನು ಹೇಳುವಾಗ ಪ್ರತಿಯೊಂದು ಮನ್ವಂತರದಲ್ಲೂ ಸ್ಮೃತಿ ಬದಲಾಗುವುದೆಂದೂ, ಸ್ಮೃತಿಯ ಪಾಲನೆಗೆ ಮನುವಿನ ವ್ಯವಸ್ಥೆಯೆಂದೂ ಸೂಚಿಸಿದ್ದಾರೆ. ('ಪ್ರತಿ ಮನ್ವಂತರಂ ಚೈವ ಸ್ಮೃತಿರನ್ಯಾ ವಿಧೀಯತೇ । ಸ್ಥಿತಾಶ್ಚ ಮನವೋ ನಿತ್ಯಂ ಕಲೌ ಕಲ್ಯೇ ಚತುರ್ದಶ ॥'). ಸ್ಮೃತಿಯನ್ನು ಕಾಪಿಡುವುದೆಂದರೆ ಧರ್ಮವನ್ನು ಪ್ರವರ್ತನೆ ಮಾಡುವುದು, ಎಂದರೆ ಶಾಸ್ತ್ರಪ್ರಕಾಶನ (ಇದಕ್ಕಾಗಿ ಋಷಿಗಳು), ಪ್ರಜೆಗಳು ಧರ್ಮಿಷ್ಠರಾಗಿ ನಡೆಸುವ ಕರ್ಮಗಳಿಗೆ ಫಲ ನೀಡುವುದು (ಇದಕ್ಕಾಗಿ ದೇವತೆಗಳು), ಧರ್ಮವನ್ನು ಎತ್ತಿ ನಿಲ್ಲಿಸಿ ಅದಕ್ಕೆ ಎದುರಾದವರನ್ನು ಸದೆಬಡಿಯುವುದು ಎಂದರೆ ಧರ್ಮಸಂಸ್ಥಾಪನೆ (ಇದಕ್ಕಾಗಿ ಭಗವದವತಾರ), ಜನರನ್ನು ತಮ್ಮ

ತಮ್ಮ ಕರ್ಮಗಳಲ್ಲಿ ನೇರವಾಗಿ ತೊಡಗಿಸುವುದು, ಎಂದರೆ ಪ್ರಜಾರಂಜನೆ (ಇದಕ್ಕಾಗಿ ಮನುಪುತ್ರರು).

ಸ್ಮೃತಿಯು ಮೈದಳೆಯುವ ಕಾರಣವೇ ಧರ್ಮರಕ್ಷಣೆ. ಧರ್ಮವನ್ನು ರಕ್ಷಿಸಬೇಕಾದ ಅಗತ್ಯವಾದರೂ ಏನು ? ನಮ್ಮ ಕಾಲಗಣನೆಯ ಚೌಕಟ್ಟಿನಲ್ಲಿ ಯುಗಗಳು ನಾಲ್ಕೆಂಬ ಪ್ರಸ್ತಾಪ ಬಂದಿತಲ್ಲ, ಅವುಗಳ ಹೆಸರುಗಳಿಂದಲೇ ಯುಗಧರ್ಮದ ಪರಿಚಯವಾಗುತ್ತದೆ. 'ಕೃತ'ವೆಂದರೆ ನಾಲ್ಕು ; ಧರ್ಮದ ನಾಲ್ಕೂ ಭಾಗಗಳು ಪೂರ್ಣವಾಗಿರುವ ಯುಗ ಕೃತಯುಗ. ಆಗ ಧರ್ಮರಕ್ಷಣೆಯ ಅಗತ್ಯವಿಲ್ಲ. 'ತ್ರೇತಾ' ಎಂದರೆ ಮೂರು ಭಾಗಗಳು(ತ್ರಿ) ಮಾತ್ರ ಇರುವುದು ; ಧರ್ಮದಲ್ಲಿ ಅವ್ಯವಸ್ಥೆ ಆಗಲೇ ತಲೆದೋರಿತೆಂದರ್ಥ. 'ದ್ವಾಪರ'ವೆಂದರೆ ಎರಡು (ದ್ವೇ) ; ಅರ್ಧ ಧರ್ಮ ಮರೆಯಾಗಿ ಇನ್ನರ್ಧವೇ ಉಳಿದುಕೊಂಡಿರುವ ಕಾಲ ಅದು. 'ಕಲಿ' ಯೆಂದರೆ 'ಕೇವಲ', ಒಂದು ; ಧರ್ಮ ಒಂದೇ ಕಾಲಿನ ಮೇಲೆ ನಿಂತಿರುವ ಸಮಯ. ಹೀಗೆ ಯುಗಯುಗಕ್ಕೆ 'ಧರ್ಮಭ್ರಂಶ'ವಾಗುತ್ತ ಬರುವುದೆಂದು ಪಾಂಚರಾತ್ರ ಸಿದ್ಧಾಂತ. ಇದರ ಸಂಕೇತವಾಗಿ ಯುಗಗಳ ಅವಧಿಯೂ ಕುಂದುತ್ತ ಬರುತ್ತದೆ. ಕೃತಯುಗ, ದೇವಮಾನದಲ್ಲಿ. 4,800 ವರ್ಷಗಳು (ಮನುಷ್ಯಮಾನದಲ್ಲಿ 1.728.000 ವರ್ಷಗಳು) ; ತ್ರೇತಾಯುಗ 3,600 ವರ್ಷಗಳು (1,296,000); ದ್ವಾಪರಯುಗ 2,400 ವರ್ಷಗಳು (8,64,000) ; ಕಲಿಯುಗ 1,200 ವರ್ಷಗಳು (4,32.000).

ಇದೇ ಕಲ್ಪನೆ ಭಗವದ್ಗೀತೆಯಲ್ಲೂ ಬರುತ್ತದೆ. ಅದು ಸಹಜವೇ, ಏಕೆಂದರೆ ಅದು ಪಾಂಚರಾತ್ರ ಸಂಪ್ರದಾಯದ ಗ್ರಂಥವೇ. ವೈವಸ್ವತನಿಗೆ ತಾನು ಹೇಳಿದ 'ಯೋಗ' (ಎಂದರೆ ಕರ್ಮಯೋಗ) ಕಾಲಕ್ರಮದಲ್ಲಿ ಮರೆಯಾಯಿತು ಎಂದು ಕೃಷ್ಣನ ಮಾತಿದೆ ('ಮಹತಾ ಕಾಲೇನ ನಷ್ಟಃ' 4, 2). ಕುಮಾರಿಲಭಟ್ಟರು ಸ್ಮೃತಿಯೆಂದು ಕರೆದಿರುವ ಧರ್ಮವನ್ನು ಕೃಷ್ಣನೇ ಮೊಟ್ಟಮೊದಲು ವಿವಸ್ವತನಿಗೆ ಹೇಳಿದುದಾಗಿಯೂ, ವಿವಸ್ವತನು ಮನುವಿಗೆ, ಮನು ಇಕ್ಷ್ವಾಕುವಿಗೆ ಹೇಳಿದುದಾಗಿಯೂ, ಇದನ್ನು ರಾಜರ್ಷಿಗಳು ಪರಂಪರೆಯಿಂದ ಬಂದಂತೆ ಅರಿತುಕೊಂಡರೆಂದೂ ಅಲ್ಲಿ ಬರುವ ಒಕ್ಕಣೆ. ಎಂದರೆ ಧರ್ಮದ ಪರಂಪರೆ ಉಳಿಯಬೇಕಾದುದು ಮುಖ್ಯವಾದ ಮಾತು. ಇದಕ್ಕಾಗಿ ಮನು. ಈ ಕೆಲಸವನ್ನು ನಿರ್ವಹಿಸುವವರು ದೇವತೆಗಳು, ಋಷಿಗಳು, ಭಗವದವತಾರಗಳು, ಮನುಪುತ್ರರು.

ಹದಿನಾಲ್ಕು ಮನುಗಳ ಹೆಸರುಗಳನ್ನೂ ಅವರ ಉಗಮವನ್ನೂ ಗಮನಿಸಿದಾಗ ಸ್ಪಷ್ಟವಾಗುವ ಅಂಶ ಅವರೆಲ್ಲ ಒಂದೇ ವಂಶದವರಲ್ಲ ಎಂಬುದು. ಒಂದು ಮನ್ವಂತರದ ಮನುವಿಗೂ ಮುಂದಿನ ಮನ್ವಂತರದ ಮನುವಿಗೂ ಸಂಬಂಧವಿರಲೇಬೇಕೆಂಬ ನಿಯಮವಿಲ್ಲ. ಅದು ಸಾಧ್ಯವೂ ಅಲ್ಲ. ಒಂದೊಂದು ಮಹಾಯುಗ (ಎಂದರೆ ನಾಲ್ಕು ಯುಗಗಳು) ಕಳೆದ ಮೇಲೆ ಪ್ರಳಯವಾಗುತ್ತದೆ; ಇಂಥ ಎಪ್ಪತ್ತೊಂದು ಮಹಾಯುಗಗಳು (ಎಂದರೆ ಒಂದು ಮನ್ವಂತರ) ಕಳೆದ ಮೇಲೆ ಮಹಾಪ್ರಳಯ. ಮನುವೂ, ದೇವತೆಗಳೂ, ಋಷಿಗಳೂ, ಮನುಪುತ್ರರೂ ಎಲ್ಲರೂ ಅಳಿಯುತ್ತಾರೆ; ಭಗವದವತಾರವೂ ಮರೆಯಾಗುತ್ತದೆ. ಹಿಂದಿನದು ಯಾವುದೂ ಮುಂದಕ್ಕೆ ಸಾಗಿಬರುವಂತಿಲ್ಲ. ಈಗ ನಾವಿರುವುದು ವೈವಸ್ವತ ಮನ್ವಂತರ. ಇಲ್ಲಿ ಸ್ವಾಯಂಭುವ ಮನ್ವಂತರದ ಪ್ರಭಾವವೂ ಇದೆ ಎಂದರೆ ಅರ್ಥವಿಲ್ಲ. ಎರಡು ಮನು ಸಂಪ್ರದಾಯಗಳ ಸೆಣಸಾಟವೆಂಬುದು ಸಾಧ್ಯವಿಲ್ಲ.

ಹೆಸರಿನಿಂದ ಕರೆಯಲ್ಪಟ್ಟ ಮನುವೇ ಮನ್ವಂತರದ ಕಡೆಯವರೆಗೂ ಉಳಿದಿರುತ್ತಾನೆ ಎಂದೂ ಪುರಾಣಗಳ ಅಭಿಪ್ರಾಯವಲ್ಲ. ಮನು ಭೂಮಿಯ ಮೇಲೆ ಮೊಟ್ಟಮೊದಲು 'ರಾಜ'ನಾಗಿ ಸ್ಮೃತಿಯನ್ನು ಕಾಪಾಡುತ್ತಾನೆ. ಮುಂದೆ ಬಂದ 'ರಾಜ'ರೆಲ್ಲ ಅವನ ಮಕ್ಕಳು ಮೊಮ್ಮಕ್ಕಳೆಂದೇ ಪ್ರತೀತಿ. "ಮನುರಾದೌ ಪೃಥಿವ್ಯಾಂ ರಾಜಾ ಭವತಿ, ತತ್ಪುತ್ರ ಪೌತ್ರಾದಯೋ ಮನ್ವಂತರ ಸಮಾಪ್ತಿಪರ್ಯಂತಂ ರಾಜಾನೋ ಭವಂತಿ", ಇದು ಭಾಗವತ ಟೀಕಾಕಾರರ ನಿರೂಪಣೆ. ಇದೇ ಅರ್ಥದಲ್ಲಿಯೇ ಕಾಳಿದಾಸನು ವೈವಸ್ವತ ಮನುವನ್ನು "ಮಹೀಕ್ಷಿತಾಂ ಆದ್ಯಃ" ಎಂದು ವರ್ಣಿಸಿರುವುದು. ಕವಿಯು ಮುಂದರಿದು "ಪ್ರಣವಃ ಛಂದಸಾಂ ಇವ" (ವೇದ ಮಂತ್ರಗಳಿಗೆ ಓಂಕಾರವು ಹೇಗೋ ಹಾಗೆ) ಎನ್ನುವಾಗ ಪ್ರಣವಕ್ಕೂ ಛಂದಸ್ಸಿಗೂ ನೇರವಾದ ನಂಟುಂಟು ಎಂದರ್ಥವಲ್ಲ; ವೇದಮಂತ್ರಗಳನ್ನು ಹೇಳುವ ಮೊದಲಲ್ಲಿ ಓಂಕಾರವನ್ನು ಉಚ್ಚರಿಸುವ ವಾಡಿಕೆಯನ್ನು ಕವಿ ಸೂಚಿಸಿದ್ದಾನೆ ಅಷ್ಟೆ. ರಘುವಂಶದ ರಾಜರೆಲ್ಲ ಈ ಮನ್ವಂತರದವರೇ ಆದುದರಿಂದ ಅವರಿಗೆಲ್ಲ ವೈವಸ್ವತಮನು ಆದ್ಯ, ಮೊಟ್ಟಮೊದಲ ರಾಜ. ರಾಜನು ಧರ್ಮಪ್ರವರ್ತಕನೆಂಬುದು ಕೌಟಿಲ್ಯನ ಅರ್ಥಶಾಸ್ತ್ರದಲ್ಲೇ (3, 1, 38) ಬರುವ ಒಕ್ಕಣೆ.

ಈಗ ಆಗಿ ಹೋಗಿರುವ ಆರು ಮನುಗಳಲ್ಲಿ ಸ್ವಾಯಂಭುವ ಬ್ರಹ್ಮನ ಮಗ, ಸ್ವಾರೋಚಿಷ ಅಗ್ನಿಯ ಮಗ, ಉತ್ತಮ ಪ್ರಿಯವ್ರತನ ಮಗ, ವೈವಸ್ವತ ಸೂರ್ಯನ

ಮಗ ಹೀಗೆ ; ಇನ್ನು ಮನುಪುತ್ರರ ಹೆಸರುಗಳೂ ವ್ಯಕ್ತಿಗಳ ಹೆಸರಂತೆ ತೋರುವುದಿಲ್ಲ. ನಿದರ್ಶನಕ್ಕೆ ಸ್ವಾಯಂಭುವ ಮನುವಿನ ಮಕ್ಕಳು ಅಗ್ನಿಧ್ರ (ಎಂದರೆ ಋತ್ವಿಕ್ಕುಗಳಲ್ಲಿ ಒಬ್ಬ), ಅಗ್ನಿಬಾಹು, ಜ್ಯೋತಿಷ್ಮಾನ್, ದ್ಯುತಿಮಾನ್, ಹವ್ಯ, ಮೇಧಾ. ಮೇಧಾತಿಥಿ, ವಸು ಇವೆಲ್ಲ ಯಜ್ಞಕ್ಕೆ ಸಂಬಂಧಪಟ್ಟ ವಿವರಗಳೇ. ಈ ಮನುವಿನ ಕಾಲದಲ್ಲಿ ಭಗವದವತಾರವು ಯಜ್ಞರೂಪವಾಗಿಯೇ. ಎರಡನೆಯ ಸ್ವಾರೋಚಿಷ ಮನುವಿನ ಮಕ್ಕಳು ಸಭ, ನಭಸ್ಯ, ಪ್ರಸೃತಿ ಮತ್ತು ಭಾವನ ; ಆ ಕಾಲದ ಭಗವದವತಾರ 'ವಿಭು'ವಾಗಿ. ಇದರ ಅರ್ಥವೇನು ? ಯಜ್ಞವು ಪ್ರಥಮಧರ್ಮವಾಗಿ ಕಾಣಿಸಿಕೊಂಡ ಮೇಲೆ ('ತಾನಿ ಧರ್ಮಾಣಿ ಪ್ರಥಮಾನಿ ಆಸನ್') ಅದರ ಪ್ರಭಾವ ವ್ಯಾಪಕವಾಯಿತೆಂದು. ಮೂರನೆಯ ಮನುವಿನ ಕಾಲದಲ್ಲಿ ಭಗವದವತಾರ 'ಸತ್ಯಸೇನ'ನಾಗಿ ; ಆ ಮನುವಿನ ಮಕ್ಕಳು ಊರ್ಜ, ಭೂರ್ಜ, ಶುಚಿ, ಶುಕ್ರ, ಮಧು ಮೊದಲಾದವರು. ಯಜ್ಞದ ಪ್ರಯೋಜನವಾಗಿ ತೋರಿಕೊಳ್ಳುವ ವಿವರಗಳು ಇವು. ಮುಂದಿನ ಮನುಪುತ್ರರು ಅಕಲ್ಮಷ, ತಪೋಧನ್ವೀ, ತಪೋಮೂಲ, ತಪೋಧನ, ತಪೋರತಿ, ತಪಸ್ಯ, ತಪೋದ್ಯುತಿ, ತಪೋಭಾಗೀ, ತಪೋಯೋಗೀ ಇವರು. ಯಜ್ಞದ ಕಾಲ ಮುಗಿದು ಧರ್ಮದ ಚೌಕಟ್ಟಿನಲ್ಲಿ ತಪಸ್ಸಿನ ಪ್ರಾಬಲ್ಯ ಇರುವುದರ ಸಂಕೇತವಾಗಿ ಈ ಹೆಸರುಗಳು. ಆಗಿನ ಭಗವದವತಾರ 'ಹರಿ', ಎಂದರೆ ಮೂರ್ತಿಮಂತನಾದ ವಿಷ್ಣು, ಯಜ್ಞನಾಮಕನಲ್ಲ.

ಮುಂದಿನ ಮನುವಿನ ಮಕ್ಕಳ ಹೆಸರನ್ನು ನೋಡಿ. ತತ್ತ್ವದರ್ಶೀ, ವಿತ್ತವಾನ್, ಹವ್ಯಪ, ಮುಕ್ತ, ನಿರುತ್ಸುಕ, ಸತ್ತ್ವ, ನಿರ್ಮೋಹ, ಪ್ರಕಾಶಕ, ಕಪಿ, ಅರುಣ ಇವೆಲ್ಲ ಜಗತ್ತಿನಲ್ಲಿ ಬೇರೆ ಬೇರೆ ಪ್ರವೃತ್ತಿಗಳನ್ನು ಸೂಚಿಸುವಂಥ ಮಾತುಗಳೆಂದು ಬೇರೆ ಹೇಳಬೇಕೆ ? ತಪಸ್ಸಿನ ಪ್ರಾಬಲ್ಯವೂ ಮರೆಯಾದ ಮೇಲೆ ಲೋಕವ್ಯವಹಾರದಲ್ಲೇ ಧರ್ಮ ಉಳಿಯುವ ಸಂಕೇತ ಇಲ್ಲಿದೆ. ಐದನೆಯ ಮನುವಿನ ಮಕ್ಕಳು ಉರು, ಪುರು, ಶತದ್ಯುಮ್ನ (ಇವೆಲ್ಲ ಸಮೃದ್ಧಿಸೂಚಕವಾದ ಮಾತುಗಳು). ತಪಸ್ವೀ, ಸತ್ಯವಾಕ್. ಕವಿ, ಅಗ್ನಿಷ್ಟುಪ್, ಅತಿರಾತ್ರ, ಸ್ವಚ್ಛಸ್ವ, ಅಭಿಮನ್ಯು (ಇವೆಲ್ಲ ಜ್ಞಾನ, ಕರ್ಮ, ಶಾಂತಿಗಳನ್ನು ಸೂಚಿಸುವ ಮಾತುಗಳು).

ಇವೆಲ್ಲ ವಿವರಗಳನ್ನು ತೋರಿಸಿರುವುದರ ತಾತ್ಪರ್ಯ, ಮನ್ವಂತರಗಳ ಮನುಗಳು ಐತಿಹಾಸಿಕವೆನ್ನಬಹುದಾದ ವ್ಯಕ್ತಿಗಳಲ್ಲ. ಮುಂದಿನ ಮನ್ವಂತರಗಳಲ್ಲಿ ಬರಲಿರುವ ಮನುಗಳಿಗೂ ಇದೇ ವಿವರಗಳನ್ನು (ದೇವತೆಗಳು, ಅವತಾರ, ಋಷಿ

ಗಳು, ಮನುಪುತ್ರರು) ಆಗಲೇ ಕಾಣಿಸಿದ್ದಾರೆ! ಎಂದಮೇಲೆ ಐತಿಹಾಸಿಕತೆಯ ಸ್ವರೂಪ ಎಷ್ಟರಮಟ್ಟಿಗಿದ್ದೀತು? ಹಿಂದಿನ ಆರು ಮನ್ವಂತರಗಳ ಮನುಗಳಲ್ಲಿ ಯಾರಿಗೂ ಚರಿತ್ರೆಯ ಗಂಧವನ್ನು ಬಳಿಯುವುದು ತಪ್ಪು. ಕಾಲಮಾನದ ಕಲ್ಪನೆಯಲ್ಲಿ ಪರಿಣಾಮವನ್ನು ಸೂಚಿಸುವ ಪ್ರತಿಮೆಗಳು ಅವು ಎಂದು ಗ್ರಹಿಸಿದರೆ ಸಾಕು. ವರ್ತಮಾನ ಮನ್ವಂತರದ ವೈವಸ್ವತನ ವಿಚಾರ ಮುಂದೆ ನೋಡೋಣ.

(೪)

'ಮನು' ಎಂಬ ಮಾತಿಗೆ ಅರ್ಥವಾದರೂ ಏನು? ಋಗ್ವೇದದಷ್ಟು ಹಳೆಯ ಪದ ಅದು. ಋಗ್ವೇದ ಸೂಕ್ತಗಳಲ್ಲಿ ಹಲವೆಡೆ ಕಾಣಿಸಿಕೊಳ್ಳುತ್ತದೆ; ಬೇರೆ ಬೇರೆ ಸಂದರ್ಭಗಳಲ್ಲಿ ಮೂಡಿಕೊಳ್ಳುತ್ತದೆ. ಈ ಪ್ರಸ್ತಾಪಗಳಲ್ಲಿ ಮುಖ್ಯವೆನಿಸಿದುವನ್ನು ಅನುಬಂಧದಲ್ಲಿ ಕೊಟ್ಟಿದ್ದೇನೆ. ಆರಣ್ಯಕ-ಬ್ರಾಹ್ಮಣಗಳಲ್ಲೂ ಬರುತ್ತದೆ; ಮಹಾಭಾರತದಲ್ಲೂ ಬರುತ್ತದೆ. ಪುರಾಣಗಳಲ್ಲಂತೂ ಸರಿಯೇ ಸರಿ. ಮನುಸ್ಮೃತಿಯಲ್ಲೂ ಇತರ ಹಲವು ಸ್ಮೃತಿಗಳಲ್ಲೂ ಮನುಗಳ ಮಾತಿದೆ. ಇವೆಲ್ಲ ಉಲ್ಲೇಖಗಳಲ್ಲಿ ಬೇರೆ ಬೇರೆ ಬಗೆಗಳಲ್ಲಿ ಮನುವನ್ನು ಕಾಣಿಸಿದ್ದಾರೆ. ಅತಿಪ್ರಾಚೀನಕಾಲದ ಮುನಿಗಳಲ್ಲಿ ಒಬ್ಬ (ಋಗ್ವೇದ 8, 30, 2 'ಮನೋಃ ಯಜ್ಞಿಯಾಸಃ', 1, 112, 16 'ಪುರಾ ಮನವೇ ಗಾತುಮಿಷಥುಃ'; 1, 45, 1 'ಮನುನಾ ಕೃತಾ ಸ್ವಧಯಾ ವಿತಸ್ತಾ' ಇತ್ಯಾದಿ), ಮನುಷ್ಯಕುಲದ ತಂದೆ (ಋಗ್ವೇದ, 1, 80, 16 'ಮನುಷ್ಪಿತಾ'; 2, 33, 3 'ಮನುರವೃಣೀತಾ ಪಿತಾ ನಃ'; ತೈತ್ತಿರೀಯ ಸಂಹಿತೆ, 2, 1, 5, 6 'ಮಾನವ್ಯೋ ಹಿ ಪ್ರಜಾಃ' ಇತ್ಯಾದಿ), ದೇವತೆಗಳಿಗೆ ಒಡೆಯನಾದ ಇಂದ್ರನಿಂದ ಸಮೃದ್ಧಿಯನ್ನು ಪಡೆದವನು (ಋಗ್ವೇದ 8, 98, 6 'ಮನೋ ವೃಧಃ'; 8, 52, 1, 'ಯಥಾ ಮನೌ ವಿವಸ್ವತಿ ಸೋಮಂ ಶಕ್ರಾಪಿಬಃ'); ರೋಗಗಳನ್ನು ತೊಡೆದುಹಾಕಿ ಸುಖವನ್ನು ಕೊಡುವ ಬಗೆಯನ್ನು ಅರಿತವನು (ಋಗ್ವೇದ, 2, 33, 13, 'ಯಾನಿ ಮನು ರವೃಣೀತಾ'; ಸಾಯಣಾಚಾರ್ಯರು 'ಯಾನಿ' ಎಂದರೆ 'ಭೇಷಜಾನಿ ಯುಷ್ಮದೀಯಾನಿ' ಎಂದು ವಿವರಿಸಿದ್ದಾರೆ.) ಲೋಕಕ್ಕೆ ಹಿತವೆನಿಸುವ ಧರ್ಮವನ್ನು ಹೇಳಿದವನು (ಋಗ್ವೇದ, 8, 63, 1 'ಯಸ್ಯದ್ವಾರಾ ಮನುಷ್ಪಿತಾ ದೇವೇಷು'; 5, 114, 2 'ಯಚ್ಛಂ ಚ ಯೋಶ್ಚ ಮನುರಾಯೇಜೇ ಪಿತಾ'), ತೈತ್ತಿರೀಯ ಸಂಹಿತೆ, 2, 2, 10, 2 'ಯದ್ವೈ ಕಿಂ

ಚ ಮನುರವದತ್ ತದ್ಭೇಷಜಂ'; ತಾಂಡ್ಯ ಬ್ರಾಹ್ಮಣ, 23, 16, 17 'ಮನುರ್ವೈ ಯತ್ ಕಿಂಚಾವದತ್ ಭೇಷಜಂ ಭೇಷಜತಾ ಯೈ' ಇತ್ಯಾದಿ).

ಆದರೆ ಹೆಚ್ಚಿನ ಉಲ್ಲೇಖಗಳಲ್ಲಿ ಮನುವೆಂದರೆ ಮನುಷ್ಯನೆಂಬ ಅರ್ಥವೇ ಪ್ರಸ್ತುತವಾಗಿದೆ (ಋಗ್ವೇದ, 8, 27, 4 'ಮನವೇ ವಿಶ್ವವೇದಸೋ ಭುವನ್ ವೃಧೇ'; 3, 2, 15 'ಮನುರ್ಹಿತಂ'; 10, 62, 8 'ಮನುಸ್ಸೋಕರ್ಮೇವ ರೋಹತು'; 8, 98, 6 'ಮನೋರ್ವೃಧಃ'; 10, 53, 6 'ಮನುರ್ಭವ ಜನಯಾ ದೈವ್ಯಂ ಜನಂ', ಇದೇ ತೈತ್ತಿರೀಯ ಸಂಹಿತೆ 3, 4, 2, 2 ರಲ್ಲಿ ಬಂದಿದೆ ; 1, 45, 1 'ಮನುಜಾತಂ ಘೃತಪ್ರುಷಂ'; 5, 21, 1 'ಮನುಷ್ವನ್ ತ್ವಾ ನಿ ಧೀ ಮಹಿ'; 1. 46, 13 'ಮನುಷ್ವಚ್ಚಂ ಭೂ ಆಗತಂ' ಇತ್ಯಾದಿ). ಆದರೆ ಜೀವವಿಕಾಸದ ಕ್ರಮದಲ್ಲಿ ಬಂದ ಮನುಷ್ಯನೆಂಬ ಪ್ರಾಣಿಮಾತ್ರನಲ್ಲ. ಅಧ್ಯಾತ್ಮಿಕ ಸಂಪತ್ತಿನ ಗುಟ್ಟನ್ನು ತಿಳಿದು, ಧರ್ಮದ ದಾರಿಯನ್ನು ಹಿಡಿದ ಮನುಷ್ಯ ಇಲ್ಲಿ ಅಭಿಪ್ರೇತವಾಗಿರುವುದು. ಹೀಗೆಂದೇ, ಇಂದ್ರನ ಅನುಗ್ರಹವನ್ನು ಸಂಪಾದಿಸಿದವನು (ಋ. 8–63–1 ; 8–98–6 ; 8–52–1), ರುದ್ರಪುತ್ರರಾದ ಮರುತ್ತರನ್ನು ಒಲಿಸಿಕೊಂಡವನು (ಋ. 2, 33, 13). ಅಶ್ವಿನೀ ದೇವತೆಗಳಿಂದ ದುಃಖಪರಿಹಾರದ ದಾರಿಯನ್ನು ಕಂಡುಕೊಂಡವನು (ಋ. 1, 112, 16), ಸುಖವನ್ನೊದಗಿಸುವ ರುದ್ರನಿಗೆ ಪ್ರಿಯನಾದವನು (ಋ. 1, 114, 2), ಎಂದು ಮುಂತಾಗಿ ಪ್ರಶಂಸೆ ಆಡಿಗಡಿಗೆ ಬರುತ್ತದೆ.

ಇದು ಯಾವೊಬ್ಬ ವ್ಯಕ್ತಿಯನ್ನೂ ಕುರಿತು ಆಡಿದ ಮಾತೆಂದು ಸೂಚನೆಯಿಲ್ಲ. ಕೆಲವು ಮಂತ್ರಗಳಲ್ಲಿ ಅಥರ್ವನ್, ದಧ್ಯಙ್, ತ್ರಿತ ಇವರೊಂದಿಗೆ ಮನುವಿನ ಉಲ್ಲೇಖ ವಿದೆ (1, 112, 16 ; 1, 80, 16 ; 8, 27, 4 ; 8, 52, 1). ಆದುದ ರಿಂದ ವ್ಯಕ್ತಿಯ ಹೆಸರೋ ಎಂದು ಸಂಶಯ ಮೂಡಿಕೊಳ್ಳಬಹುದು. ಆದರೆ ಈ ಹೆಸರುಗಳೂ ವ್ಯಕ್ತಿನಾಮಗಳಲ್ಲವೆಂದು ಸಂದರ್ಭಗಳಿಂದ ಸ್ಪಷ್ಟವಾಗುತ್ತದೆ. ಮತ್ತು ಸಾಯಣಾಚಾರ್ಯರು ಋ. 8, 47, 4 ('ಮನೋರ್ವಿಶ್ವಸ್ಯ') ಮೊದಲಾದ ಮಂತ್ರಗಳಲ್ಲೆಲ್ಲ 'ಮನು'ವೆಂದರೆ ಮನುಷ್ಯನೆಂದೇ ಅರ್ಥಮಾಡಿದ್ದಾರೆ. ಋಗ್ವೇದದಲ್ಲಿ ಮನುಷ್ಯನನ್ನು ದುಷ್ಟಶಕ್ತಿಗಳಿಂದ ಬೇರ್ಪಡಿಸಿ ಹೇಳುವುದಿದೆ. (1, 130, 8 'ಮನವೇ ಶಾಸದ ವ್ರತಾನ್ ತ್ವಚಂ ಕೃಷ್ಣಾಂ ಅರಂಧಯತ್'. ಇಲ್ಲಿ ಕೃಷ್ಣನೆಂದರೆ ಅಂಶಮತಿಯಲ್ಲಿರುತ್ತಿದ್ದ ಅಸುರನೊಬ್ಬನೆಂದು ಇತಿಹಾಸವನ್ನು ಸಾಯಣಾಚಾರ್ಯರು

ಸೂಚಿಸಿದ್ದಾರೆ ; 8, 96, 6). ಮನುಸ್ಮೃತಿಯಲ್ಲಿಯೂ 'ರಕ್ಷಾಂಸಿ ಪಿಶಾಚಾಶ್ಚ ಮನುಷ್ಯಾಶ್ಚ ಜರಾಯುಜಾಃ' (1, 43) ಎನ್ನುವ ಪ್ರಸ್ತಾಪವಿದೆಯಷ್ಟೆ ? ಮನುವಿನ ಸಂತತಿಯವರು ರಾಕ್ಷಸರಲ್ಲ, ಪಿಶಾಚರಲ್ಲ, ನೀಚವರ್ಗದ ಪ್ರಾಣಿಗಳಲ್ಲ. ಇವೆಲ್ಲಕ್ಕಿಂತ ಬೇರೆ ಎನ್ನುವುದು ತಾತ್ಪರ್ಯ.

'ಮನು' ಎನ್ನುವ ಮಾತಿಗೆ 'ಮನ್' (ಎಂದರೆ ಆಲೋಚನೆ ಮಾಡುವುದು, ಚಿಂತಿಸುವುದು, ಮನಸ್ಸನ್ನು ಬಳಸುವುದು) ಎನ್ನುವುದು ಮೂಲ ('ಮನ್ಯತೇ ಇತಿ', ಮನ್ ಶೃ ಸ್ಪೃಸ್ನಿಹೀತಿ, ಉಣಾದಿ 1, 11 ಇತಿಉಃ). ಸಂಸ್ಕೃತದ ಈ ಮಾತಿಗೆ ಸಂವಾದಿಗಳಾಗಿ ಲ್ಯಾಟಿನ್ನಿನ 'ಮೆನ್ಸ್', ಈಜಿಪ್ಟ್ ಭಾಷೆಯ 'ಮನೆಸ್', ಪೈಥಾಗೊರಸ್ ಹೇಳಿದ 'ಮೊನಸ್', ಗೋಥಿಕ್‌ನ 'ಮನ್ನ', ಟ್ಯಾಸಿಟಸ್ ಉಲ್ಲೇಖಿಸುವ 'ಮನ್ನುಸ್' ಇವೆಲ್ಲ ಇವೆ. ಈ ಮಾತುಗಳಿಗೆಲ್ಲ ಶ್ರೇಷ್ಠವಾದ ಮನಸ್ಸುಳ್ಳ ವ್ಯಕ್ತಿ ಎಂದೇ ಅರ್ಥ. ಋಗ್ವೇದದಲ್ಲಿ ಋಭುಗಳನ್ನು ಮನುವಿನ ಮಕ್ಕಳು (3, 60, 3 'ಮನೋರ್ನಪಾತಃ') ಎಂದು ನಿರ್ದೇಶಿಸಿರುವುದು ಇದೇ ಅರ್ಥದಲ್ಲಿಯೇ. ಮತ್ತೆ 'ಮನ್ಯು'ವೆಂಬ ಮಾತಿಗೂ ಇದೇ ಚೌಕಟ್ಟು. ಉಗ್ರವಾದ ಮನಸ್ಸು 'ಮನ್ಯು', ಕರ್ಮದಲ್ಲಿ ತೊಡಗಿರುವ ಮನಸ್ಸು. ಅಗ್ನಿ, ಕಾಮ, ರುದ್ರರನ್ನು 'ಮನ್ಯು' ಎಂದು ಬಣ್ಣಿಸುವುದರ ಹಿನ್ನೆಲೆ ಇದೇ ; ವಾಯು ಪುರಾಣದಲ್ಲಿ (100, 53) 'ಮನನಾತ್ ಮಾನನಾತ್ ಮನವಃ ಸ್ಮೃತಾಃ' ಎಂದು ಲಕ್ಷಣವಿದೆ.

ಅಗ್ನಿಪುರಾಣದಲ್ಲಿ ಸರ್ಗಕಥನವೆಂಬ ಪರಿಚ್ಛೇದ ಮನುಷ್ಯರನ್ನು 'ಅರ್ವಾಕ್ ಸ್ರೋತ'ವೆಂದು ಕರೆದು ಅವರ ಸ್ವಭಾವವನ್ನು "ದುಃಖಬಹುಲಾಃ ಭೂಯೋ ಭೂಯಶ್ಚ ಕಾರಿಣಃ। ಪ್ರಕಾಶಾ ಬಹಿರಂತಶ್ಚ ಮನುಷ್ಯಾಃ ಸಾಧಕಾಶ್ಚ ತೇ ॥" ಎಂದು ವಿವರಿಸಿದೆ. ಮನುಷ್ಯರಿಗೆ ದುಃಖದ ಅನುಭವ ಹೆಚ್ಚು ; ಅದನ್ನು ತೊಡೆದು ಹಾಕಲು ಮತ್ತೆ ಮತ್ತೆ ಕೆಲಸಗಳನ್ನು ಕೈಗೊಳ್ಳುತ್ತಾರೆ. ಕೆಲಸಕ್ಕೆ ಅನುಕೂಲವಾಗುವಂತೆ ಅವರಿಗೆ ಹೊರಗೂ ಬೆಳಕು (ಎಂದರೆ ಇಂದ್ರಿಯಗಳು), ಒಳಗೂ ಬೆಳಕು (ಎಂದರೆ ಮನಸ್ಸು). ಮತ್ತು ಕೈಹಿಡಿದ ಕೆಲಸವನ್ನು ಬಿಡದಿರುವ ಸಂಕಲ್ಪ ಅವರಿಗಿದೆಯಾಗಿ ಅವರು ಸಾಧಕರು. ಮನುಷ್ಯರನ್ನು ಪುರಾಣಗಳು (ವಹ್ನಿ–ವಿಷ್ಣು–ಮೊದಲಾದುವು) 'ಅರ್ವಾಕ್ ಸ್ರೋತ'ವೆಂದು ಕರೆದಿವೆ. ಅವ್ಯಕ್ತವಾದ ಮೇಲೆ ಸೃಷ್ಟಿಕ್ರಮದಲ್ಲಿ ಅವರು ಕಾಣಿಸಿಕೊಂಡವರೆಂದರ್ಥ. ಅರ್ವಾಕ್ ಸ್ರೋತವೆನ್ನುವುದು

ಊರ್ಧ್ವಸ್ರೋತ (ಎಂದರೆ ದೇವತೆಗಳ ಸೃಷ್ಟಿ) ಮತ್ತು ತಿರ್ಯಕ್ ಸ್ರೋತ (ಎಂದರೆ ನೀಚವರ್ಗದ ಪ್ರಾಣಿಗಳ ಸೃಷ್ಟಿ) ಈ ಎರಡರಿಂದ ಬೇರ್ಪಟ್ಟದ್ದು.

ಎಂದರೆ ಮನುಷ್ಯರು ಕರ್ಮಪರರು ; ಅದಕ್ಕೆ ಅನುಕೂಲವಾಗಿ ಮನಸ್ಸು. ಇದೇ ಅವರ ವೈಶಿಷ್ಟ್ಯ. ಹಾಗೆಂದೇ ಮೊದಲ ಮನುಷ್ಯನಿಗೆ ಮನುವೆಂದೇ ಹೆಸರು; ಉಳಿದವರೆಲ್ಲ ಮನುಜರು, ಮನುಷ್ಯರು, ಮಾನವರು ; ಎಂದರೆ ಮನುವಿನಿಂದ ಒದಗಿ ಬಂದವರು, ಮನುವಿನೊಂದಿಗೆ ನಂಟುಳ್ಳವರು. ಒಂದು ದೃಷ್ಟಿಯಿಂದ ಎಲ್ಲರೂ ಮನುಗಳೇ. ವೈದಿಕ ಸಾಹಿತ್ಯದಲ್ಲಿ ಮನುವೆಂಬ ಮಾತು ಕರ್ಮದ ಹೆಗ್ಗಳಿಕೆಯನ್ನು ಅರಿತುಕೊಂಡು ಮನಸ್ಸನ್ನು ಬಳಸಬಲ್ಲ ಎಲ್ಲ ಮನುಷ್ಯರಿಗೂ ಅನ್ವಯಿಸುವಂತೆ ಬಳಸಲಾಗಿದೆ. 'ಮನೋರ್ವೃಧಃ' (ಕರ್ಮಪರರಾದ ಮನುಷ್ಯ ರನ್ನು ಬೆಳೆಯಿಸುವವನು) ಎಂದು ಹೊಗಳಲ್ಪಟ್ಟ ಇಂದ್ರ 'ಹಂತಾ ದಸ್ಯೋಃ' (ಅಸುರರನ್ನು ನಾಶಪಡಿಸುವವನು) ಎಂದೂ ಹೌದು (ಋ. 8, 98, 6). ಆ ಇಂದ್ರನ ಅನುಗ್ರಹವನ್ನು ಪಡೆದುಕೊಂಡೇ ಮನುವು ದೇವತೆಗಳಿಗೆ ಪ್ರಿಯವಾಗುವ ಕರ್ಮಗಳನ್ನು ಸಂಪಾದಿಸಿದನಂತೆ (ಋ. 8. 63, 1 'ಯಸ್ಯ ದ್ವಾರಾ ಮನುಷ್ಪಿತಾ ದೇವೇಷು ಧಿಯ ಆನಜೇ'). ಇಲ್ಲಿ ಕರ್ಮಗಳನ್ನು 'ಧೀ' (ಎಂದರೆ ಮನಸ್ಸು) ಎಂದು ಕರೆಯಲಾಗಿದೆ. ಮನುಷ್ಯರಿಗೆ ಹಿತವೆನಿಸುವ ಧನವನ್ನು ಕೊಡೆಂದು ಅಗ್ನಿ ಯನ್ನು ಪ್ರಾರ್ಥಿಸುವ ಮಂತ್ರವೊಂದಿದೆ. (ಋ. 3, 2, 15 'ಮನುರ್ಹಿತಂ ಸದಂ ಇದ್ ರಾಯ ಈ ಮಹೆ'). ಮನುಷ್ಯರಿಗೆ ಹಿತವಾದ ಧನ ('ರಾಯಃ') ಎಂದರೆ ವಿಹಿತಕರ್ಮಗಳು, ಯಜ್ಞಯಾಗಾದಿಗಳು.

ಋಗ್ವೇದದ ಮಂತ್ರದ್ರಷ್ಟಾರನೊಬ್ಬನು ದೇವತೆಗಳನ್ನು ಕುರಿತು 'ತಂದೆ ಯಾದ ಮನು ತೋರಿಸಿದ ದಾರಿಯಿಂದ ನಮ್ಮನ್ನು ದೂರಮಾಡದಿರಿ!' (8, 30, 3 'ಮಾನಃ ಪಥಃ ಪಿತ್ರ್ಯಾನ್ಮಾನವಾದಧಿ ದೂರಂ ನೈಷ್ಟ ಪರಾವತಃ') ಎಂದು ಪ್ರಾರ್ಥಿಸಿದ್ದಾನೆ. ಮೊದಲ ಮನು ತನ್ನ ಸಂತತಿಯವರಿಗೆ ತೋರಿಸಿದ ದಾರಿಯೇ ಕರ್ಮದ ದಾರಿ ; ಏಕೆಂದರೆ ಅದಕ್ಕೆ ಹಿಂದಿನ ಮಂತ್ರದಲ್ಲೇ 'ಮನೋಃ ಯಜ್ಞಿಯಾಸಃ' ಎನ್ನುವ ಮಾತಿದೆ. ಮನುಷ್ಯರಿಗೆ ಅಗತ್ಯವಾದ ಕರ್ಮಮಾರ್ಗವನ್ನು ತೋರಿಸಿ, ಅವರನ್ನು ಸಂಕಟದಿಂದ ಪಾರುಮಾಡಿದ ('ಪಿತಾ' ಎಂದರೆ 'ಪಾಲಯಿತಾ') ಮೊದಲ ಮನುಷ್ಯನೇ ಮನುವೆಂದು ಋಗ್ವೇದ ಮಾತ್ರವಲ್ಲದೆ ಅಥರ್ವ ವೇದ (14, 2, 4), ಶತಪಥ ಬ್ರಾಹ್ಮಣ (1, 1, 4, 14), ತೈತ್ತಿರೀಯ ಸಂಹಿತೆ (1, 5, 1, 3 ;

2, 5, 9, 1 ; 2, 6, 7, 1 ; 3, 3, 2, 1 ; 5, 4, 10, 5 ; 7, 5, 15,3) ಕಾಠಿಕ ಸಂಹಿತೆ (8, 15), ಜೈಮಿನೀಯ ಬ್ರಾಹ್ಮಣ (3, 15, 2) ಮುಂತಾದ ವೈದಿಕ ಸಾಹಿತ್ಯದ ಭಾಗಗಳಲ್ಲಿ ಉಲ್ಲೇಖವಿದೆ.

ವಾಜಸನೇಯ ಸಂಹಿತೆಯಲ್ಲಿ 'ಮನವಃ' ಎಂದು ಬಹುವಚನ ಪ್ರಯೋಗವೂ ಇದೆ. (15, 49, 'ತಸ್ಮಿನ್ನಹಂ ನಿದಧೇ ನಾಕೇಽಗ್ನಿಂ ಯಮಾಹುರ್ಮನವಸ್ತೀರ್ಣ ಬರ್ಹಿಷಂ'). ಮಹೀಧರರು ಭಾಷ್ಯ ಬರೆಯುತ್ತ 'ಮನವಃ' ಎಂದರೆ "ಮನನ ಪ್ರಧಾನಾ ವಿದ್ವಾಂಸಃ" ಎಂದೇ ಅರ್ಥಮಾಡಿರುವುದನ್ನು ಗಮನಿಸಬೇಕು. ನಾಕದಲ್ಲಿ ಅಗ್ನಿಯನ್ನು ಇರಿಸಿದ ಸಂದರ್ಭ ಇದು ; ನಾಕದಲ್ಲಿ ಇರಿಸಲ್ಪಟ್ಟ ಅಗ್ನಿಯನ್ನು ತಮ್ಮ ಮನಸ್ಸಿನಲ್ಲಿ ಕಲ್ಪಿಸಿಕೊಂಡವರು 'ಮನುಗಳು'. ಇದೇ ಪ್ರಯೋಗ ಭಾಗವತ ದಲ್ಲಿಯೂ ಒಂದೆಡೆ ಬಂದಿದೆ. (6, 4, 25, 'ದೇಹೋಽಸವೋಕ್ಷಾ ಮನವೋ ಭೂತ ಮಾತ್ರಾನಾತ್ಮಾನ ಮನ್ಯಂ ಚ ವಿದುಃ ಪರಂ ಯತ್'). ಇಲ್ಲಿ 'ಮನವಃ' ಎಂಬ ಮಾತಿಗೆ ಶ್ರೀಧರ ಟೀಕೆಯೂ "ಅಂತಃಕರಣಾನಿ" ಎಂದು ಅರ್ಥ ಹೇಳಿದೆ. ಚಿತ್ತ, ಮನಸ್ಸು, ಅಹಂಕಾರ, ಬುದ್ಧಿ ಇವೇ ಒಳಗಿನ ಕರಣಗಳು. ಪ್ರಾಣಗಳು (ಅಸವಃ), ಇಂದ್ರಿಯಗಳು (ಅಕ್ಷಾ) ಹೊರಗಿನ ಕರಣಗಳು.

(ಇ)

ಮೇಲಿನ ಪರಿಶೀಲನೆಯಿಂದ ಮನುವೆನ್ನುವ ಮಾತು ವೈದಿಕ ಸಾಹಿತ್ಯದಲ್ಲಿ ಮನುಷ್ಯನೆಂಬ ವಿಶಾಲಾರ್ಥದಲ್ಲಿ ಬಳಸಲಾಗಿದೆ ಎಂದಾಯಿತು. ಬೇಕಿದ್ದರೆ 'ಸಮಷ್ಟಿ ಮನುಷ್ಯ', 'ಪ್ರಾತಿನಿಧಿಕ ಮನುಷ್ಯ', 'ಆದರ್ಶ ಮನುಷ್ಯ' ಎಂದುಕೊಳ್ಳಬಹುದು. ಯಾವೊಬ್ಬ ವ್ಯಕ್ತಿಯ ಹೆಸರೆಂದು ಎಲ್ಲಿಯೂ ಸೂಚನೆಯಿಲ್ಲ. ಆದರೆ 'ವೈವಸ್ವತ ಮನು'ವೆಂಬ ನಿರ್ದೇಶನ ಋಗ್ವೇದದಲ್ಲೇ ಕೆಲವೆಡೆ ಕಾಣಿಸಿಕೊಳ್ಳುತ್ತದೆ. ನಿದರ್ಶನಕ್ಕೆ 8, 52, 1 'ಯಥಾ ಮನೌ ವಿವಸ್ವತಿ'; 10, 14, 1 'ವೈವಸ್ವತಂ ಸಂಗಮನಂ ಜನಾನಾಂ'. ಇದೇ ಅಥರ್ವ 18, 1, 49 ರಲ್ಲಿಯೂ ಬರುತ್ತದೆ. ಎಂಟನೆಯ ಮಂಡಲದಲ್ಲಿ ಇಪ್ಪತ್ತೇಳನೆಯ ಸೂಕ್ತಕ್ಕೆ 'ವಿವಸ್ವತಃ ಪುತ್ರೋ ಮನು' ಎಂಬುವನೇ ಋಷಿ ; ಎಂದರೆ ವೈವಸ್ವತ ಮನು. ಈ ಸೂಕ್ತದಲ್ಲಿ ಇಪ್ಪತ್ತೆರಡು ಮಂತ್ರಗಳಿವೆ. 'ಅಗ್ನಿರುಕ್ಥೇ ಪುರೋಹಿತೋ' ಎಂದು ಮೊದಲಾಗುವ ಈ ಸೂಕ್ತಕ್ಕೆ 'ವಿಶ್ವೇದೇವತೆ' ಗಳು ದೇವತೆಗಳು.

ಇದರಲ್ಲಿ ಎರಡು ಮಂತ್ರಗಳಲ್ಲಿ 'ಮನು'ವಿನ ಉಲ್ಲೇಖವಿದೆ. (8, 27. 4 'ಮನವೇ ವೃಧೇ': 8, 27, 14 'ಮನವೇ.........ಸರಾತಯು';) : ದೇವತೆಗಳು ಮನುವನ್ನು ಬೆಳೆಯಿಸುವ, ಮನುವಿಗೆ ಸಂಪತ್ತನ್ನು ನೀಡುವ, ಸಂದರ್ಭ. ಇದ ರಿಂದ ಮನುವೇ ಸೂಕ್ತದ ಋಷಿಯೆಂದು ಭಾಷ್ಯಕಾರರು ಭಾವಿಸಿದರೋ ಏನೋ ? 'ಅನುಕ್ರಮಣಿ'ಯೇನೋ ಸೂಕ್ತದ ಋಷಿ 'ವೈವಸ್ವತ ಮನು'ವೆಂದು ನಿರ್ದೇಶಿಸಿದೆ. ಆದರೆ ವೈವಸ್ವತನೆಂಬ ವಿವರ ಸೂಕ್ತದಲ್ಲೆಲ್ಲೂ ಬರುವುದಿಲ್ಲ.

ಉಳಿದಂತೆ ಋಗ್ವೇದದಲ್ಲಿ ಹದಿನಾಲ್ಕು ಮನುಗಳ ಪ್ರಸ್ತಾಪವಾಗಲಿ, ಮನ್ವಂತರಗಳ ಕಲ್ಪನೆಯಾಗಲಿ ಕಾಣಬರುವುದಿಲ್ಲ. ಮೊದಲ ಮನುವೆಂದಾದ ಸ್ವಾಯಂಭುವನ ಉಲ್ಲೇಖವೂ ಇಲ್ಲ. ಆದರೆ ಯಾಸ್ಕರ ನಿರುಕ್ತ (3, 4) 'ಮನುಃ ಸ್ವಾಯಂಭುವೋಽಬ್ರವೀತ್' ಎನ್ನುವ ವಾಕ್ಯವನ್ನೊಳಗೊಂಡಿದೆ. ಮಹಾಭಾರತ ದಲ್ಲಿ ಸ್ವಾಯಂಭುವ ಮನುವಲ್ಲದೆ ಪ್ರಾಚೇತಸ ಮನು ಎಂಬುವನ ಶಾಸ್ತ್ರದಿಂದ ಉದ್ಧೃತವಾಕ್ಯಗಳಿವೆ. ಶಾಂತಿಪರ್ವದಲ್ಲಿ (58. 1–3) ರಾಜಧರ್ಮದ ಪ್ರವಕ್ತಾರ ರನ್ನು ಪಟ್ಟಿಮಾಡುತ್ತ ಬೃಹಸ್ಪತಿ. ವಿಶಾಲಾಕ್ಷ, ಉಶನಸ್ (ಕಾವ್ಯ), ಸಹಸ್ರಾಕ್ಷ, ಮಹೇಂದ್ರ, ಪ್ರಾಚೇತಸ ಮನು, ಭಾರದ್ವಾಜರ ಹೆಸರನ್ನು ಹೇಳಿದೆ. ಮನುಸ್ಮೃತಿ ಯಲ್ಲೂ ಪ್ರಾಚೇತಸ ಮನುವಿನ ಉಲ್ಲೇಖವಿದೆ. ಆದರೆ ಈ ಪ್ರಾಚೇತಸ ಮನು ಯಾರೆಂಬುದು ಸ್ಪಷ್ಟವಾಗುವುದಿಲ್ಲ.

ಈಗಿರುವ ಮನುಸ್ಮೃತಿಯಲ್ಲಿ ಇಪ್ಪತ್ತಕ್ಕೂ ಮಿಕ್ಕು ಸಂದರ್ಭಗಳಲ್ಲಿ ಮನು ವಿನ ವಾಕ್ಯಗಳನ್ನು ಉದ್ಧರಿಸಿರುವುದಿದೆ. (1,158 ಮತ್ತು 10, 78 'ಮನು ರಾಹ', 8–139 ; 9, 239 'ಮನುರಬ್ರವೀತ್', 'ಮನೋರನುಶಾಸನಂ', 9, 17 'ಮನುರಕಲ್ಪಯತ್' ಇತ್ಯಾದಿ). ಆದರೆ ಯಾವ ಮನುವೆಂಬ ನಿರ್ದೇಶನವಿಲ್ಲ. ಕೆಲವು ಕಡೆ (10, 78, 12, 123 ಇತ್ಯಾದಿ) 'ಮನುಪ್ರಜಾಪತಿ'ಯೆಂಬ ಒಕ್ಕಣೆ ಯಿದೆ ; ವಸಿಷ್ಠಸ್ಮೃತಿಯಲ್ಲೂ (12, 16) 'ಮನುರಾಹ ಪ್ರಜಾಪತಿಃ' ಎಂಬ ಮಾತಿದೆ. ಈ ಪ್ರಜಾಪತಿ ಮನು ಯಾರು ?

ಪ್ರಾಚೇತಸ ಮನುವಾಗಲಿ ಪ್ರಜಾಪತಿ ಮನುವಾಗಲಿ ಹದಿನಾಲ್ಕು ಮನ್ವಂತರದ ಮನುಗಳಲ್ಲಿ ಸೇರುವುದಿಲ್ಲ. ಇವರಲ್ಲಿ ಗಟ್ಟಿಯಾಗಿ ಉಳಿದುಕೊಳ್ಳುವವರು ಇಬ್ಬರೇ ಮನುಗಳು, ಸ್ವಾಯಂಭುವ ಮತ್ತು ವೈವಸ್ವತ. ಇವರಲ್ಲಿ ಸ್ವಾಯಂಭುವ ಎಷ್ಟು

ಗಟ್ಟಿಯೋ ನೋಡೋಣ. ಸ್ವಾಯಂಭುವನೆಂದರೆ ಸ್ವಯಂಭುವಿನ ಮಗ. 'ಸ್ವಯಂಭು'ವೆಂದರೆ ತಾನೇತಾನಾಗಿ ಒದಗಿ ಬಂದವನು. ಸ್ವಯಂಭುವೆನ್ನುವುದು ಬ್ರಹ್ಮನ ಹೆಸರು. ಈಗ ಬಳಕೆಯಲ್ಲಿರುವ ಮನುಸ್ಮೃತಿಯಲ್ಲಿ (1, 34) ಸ್ವಾಯಂಭುವನು ಗೌಣ ಸೃಷ್ಟಿಕರ್ತನೆಂಬ ಮಾತು ಬರುತ್ತದೆ; ಇವನನ್ನು ಹೈರಣ್ಯಗರ್ಭನೆಂದು ಕರೆದಿದ್ದಾರೆ (ಎಂದರೆ ಹಿರಣ್ಯಗರ್ಭನ ಮಗ; ಹಿರಣ್ಯಗರ್ಭ ಬ್ರಹ್ಮನೇ). ಬ್ರಹ್ಮನಿಂದ ವಿರಾಜ್ ಒದಗಿಬಂದದ್ದು, ವಿರಾಜ್ ಪುತ್ರನಾದ ಮನುವು ಭೃಗು-ನಾರದಾದಿ ಋಷಿಗಳನ್ನೂ ಹತ್ತು ಪ್ರಜಾಪತಿಗಳನ್ನೂ ಸೃಷ್ಟಿಮಾಡಿದ್ದು (2, 32, 33), ಬ್ರಹ್ಮನು ಶಾಸ್ತ್ರವನ್ನು ಮೊದಲು ಮನುವಿಗೆ ಉಪದೇಶ ಮಾಡಿದ್ದು (1, 58), ಮನು ಈ ಶಾಸ್ತ್ರವನ್ನು ಭೃಗುವಿಗೆ ಉಪದೇಶಮಾಡಿದ್ದು (1, 59) ಇಲ್ಲಿ ಬರುವ ವಿವರಗಳು. ಇಲ್ಲಿ ಮನುವೆಂದರೆ ಸ್ವಾಯಂಭುವ ಮನುವೇ. ಅವನಿಂದ ಇನ್ನೂ ಆರು ಮನುಗಳಾದರೆಂದೂ ಇಲ್ಲಿ ಹೇಳಿದೆ (2, 7).

ಮಹಾಭಾರತದಲ್ಲಿ (ಶಾಂತಿಪರ್ವ 336, 38–46) ಇನ್ನೊಂದು ಒಕ್ಕಣೆ ಬರುತ್ತದೆ. ಪರಮಾತ್ಮನು ಧರ್ಮವನ್ನು ಕುರಿತು ಹತ್ತುಸಾವಿರ ಶ್ಲೋಕಗಳುಳ್ಳ ಶಾಸ್ತ್ರವೊಂದನ್ನು ಸಿದ್ಧಪಡಿಸಿದ; ಇದು ಲೋಕವ್ಯವಹಾರಕ್ಕೆಲ್ಲ ಮಾರ್ಗದರ್ಶಕವಾಗಿದ್ದಿತು ('ಲೋಕತಂತ್ರಸ್ಯ ಕೃತ್ಸ್ನಸ್ಯ ಯಸ್ಮಾದ್ಧರ್ಮಃ ಪ್ರವರ್ತತೇ'). ಇದನ್ನವಲಂಬಿಸಿ ಸ್ವಾಯಂಭುವ ಮನುವು ಲೋಕದಲ್ಲಿ ಧರ್ಮಪ್ರಚಾರ ಮಾಡಿದ. ಸ್ವಾಯಂಭುವನ ಧರ್ಮಶಾಸ್ತ್ರವನ್ನೇ ಅನುಸರಿಸಿ ಉಶನಸನೂ ಬೃಹಸ್ಪತಿಯೂ ತಮ್ಮ ತಮ್ಮ ಶಾಸ್ತ್ರಗಳನ್ನು ರಚಿಸಿ ಲೋಕದಲ್ಲಿ ಹರಡಿದರು. ಈ ನಿರೂಪಣೆಯಲ್ಲಿ ಸ್ವಾಯಂಭುವ ಮನುವೆಂದೇ ಮಾತಿದೆ ('ತಸ್ಮಾತ್ ಪ್ರವಕ್ಷ್ಯತೇ ಧರ್ಮಾನ್ ಮನುಃ ಸ್ವಾಯಂಭುವಃ ಸ್ವಯಂ'). ಮನುಸ್ಮೃತಿಯ ಮೇಲೆ ವ್ಯಾಖ್ಯಾನವನ್ನು ಬರೆದ ಮೇಧಾತಿಥಿಯೂ ನಾರದಸ್ಮೃತಿಯಿಂದ ಶ್ಲೋಕವೊಂದನ್ನುದ್ಧರಿಸಿ ಇದೇ ವಿಚಾರವನ್ನು ಹೀಗೆ ಹೇಳಿದ್ದಾನೆ (1.58). ಇಲ್ಲಿ ಪ್ರಜಾಪತಿಯು ಶತಸಾಹಸ್ರಗ್ರಂಥ ಪರಿಮಿತವಾದ ಶಾಸ್ತ್ರವನ್ನು ಬರೆದನೆಂದೂ, ಕಾಲಕ್ರಮದಲ್ಲಿ ಮನುವೇ ಮೊದಲಾದವರು ಅದನ್ನು ಸಂಗ್ರಹ ಮಾಡಿದರೆಂದೂ ಹೇಳಿದೆ. ('ನಾರದಶ್ಚ ಸ್ಮರತಿ-ಶತಸಾಹಸ್ರೋ ಗ್ರಂಥಃ ಪ್ರಜಾಪತಿನಾ ಕೃತಃ ಸ ಮನ್ವಾದಿಭಿಃ ಕ್ರಮೇಣ ಸಂಕ್ಷಿಪ್ತ ಇತಿ'). 'ಚತುರ್ವರ್ಗ ಚಿಂತಾಮಣಿ'ಯು (ದಾನಖಂಡ) ಭವಿಷ್ಯಪುರಾಣದ ಮಾತನ್ನು ಉದ್ಧರಿಸಿ ಸ್ವಾಯಂಭುವನ ಶಾಸ್ತ್ರಕ್ಕೆ ಭಾರ್ಗವೀಯ, ನಾರದೀಯ, ಬಾರ್ಹಸ್ಪತ್ಯ,

ಅಂಗಿರಸ ಎಂಬ ನಾಲ್ಕು ಸಂಹಿತೆಗಳಿರುವುದನ್ನು ತಿಳಿಸುತ್ತದೆ ('ಸ್ವಾಯಂಭುವಸ್ಯ ಶಾಸ್ತ್ರಸ್ಯ ಚತುಸ್ರಃ ಸಂಹಿತಾ ಮತಾಃ').

ಎಂದರೆ ಸ್ವಾಯಂಭುವ ಮನುವಿನ ಧರ್ಮಶಾಸ್ತ್ರವೊಂದಿದ್ದಿತೆಂದು ಸ್ಪಷ್ಟವಾಗುತ್ತದೆ. ಅದರ ಸ್ವರೂಪ ಹೇಗಿದ್ದಿತೋ ಹೇಳುವುದು ಕಷ್ಟ. ಈಗಿನ ಮನುಸ್ಮೃತಿಗೆ ಮೂಲವಾಗಿದ್ದಿತೆಂದು ಹೇಳುವ 'ಮಾನವ ಧರ್ಮಶಾಸ್ತ್ರ' ಇದೇ ಇದ್ದೀತೋ? ನಾರದಸ್ಮೃತಿ, ಅಪರಾರ್ಕ, ವಿಶ್ವರೂಪ, ಮಿತಾಕ್ಷರಾ, ಸ್ಮೃತಿಚಂದ್ರಿಕೆ ಮೊದಲಾದ ಆಕರಗಳಲ್ಲಿ 'ವೃದ್ಧಮನು'ವೆಂಬ ಉಲ್ಲೇಖವಿದೆ; ಈ 'ವೃದ್ಧಮನು'ವಿನ ವಾಕ್ಯಗಳನ್ನು ಉದ್ಧರಿಸಿಯೂ ಇದ್ದಾರೆ. ಈಗಿನ ಮನುಸ್ಮೃತಿಯಲ್ಲೇನೋ ಈ ವಾಕ್ಯಗಳು ಕಾಣಸಿಗುವುದಿಲ್ಲ. 'ವೃದ್ಧ ಮನು'ವೆಂಬುದು ಸ್ವಾಯಂಭುವ ಶಾಸ್ತ್ರಕ್ಕೇ ಇನ್ನೊಂದು ಹೆಸರಿದ್ದಿರಬಹುದೇ? ಮಿತಾಕ್ಷರದಲ್ಲಿ 'ಬೃಹನ್ಮನು'ವೆಂಬ ಗ್ರಂಥದಿಂದ ಉದ್ಧರಿಸಿದ ವಾಕ್ಯಗಳೂ ಇವೆ. ಧರ್ಮಶಾಸ್ತ್ರ ಬರುಬರುತ್ತ ಸಂಕ್ಷಿಪ್ತವಾಯಿತಷ್ಟೆ. ಮೊದಲಿನ ಅಂದರೆ ಸ್ವಾಯಂಭುವನ, ಧರ್ಮಶಾಸ್ತ್ರವೇ ಇದ್ದಿರಬಹುದೇ?

ಇದನ್ನೆಲ್ಲಾ ಗಮನಿಸಿದಾಗ, ಸ್ವಾಯಂಭುವ ಮನು ದಿಟವಾಗಿ ವ್ಯಕ್ತಿಯೊಬ್ಬನಿದ್ದಿರಬಹುದೆಂಬ ಸಂಶಯವೇನೋ ಬರುತ್ತದೆ. ಬ್ರಹ್ಮವೈವರ್ತಪುರಾಣದಲ್ಲಿ (ಪ್ರಕೃತಿ ಖಂಡ, 51) ಸ್ವಾಯಂಭುವನು ಆದ್ಯ ಮನುವೆಂದೂ, ಬ್ರಹ್ಮನ ಮಗನೆಂದೂ, ಗಾಯತ್ರಿಯಲ್ಲಿ ಹುಟ್ಟಿದವನೆಂದೂ, ಶತರೂಪೆಯೆಂಬುವಳ ಗಂಡನೆಂದೂ, ಧರ್ಮಿಷ್ಠರಲ್ಲಿ ವರಿಷ್ಠನೆಂದೂ, ಮನುಗಳಲ್ಲಿ ಗರಿಷ್ಠನೆಂದೂ, ಶಂಭುಶಿಷ್ಯನೆಂದೂ, ವಿಷ್ಣುವ್ರತಪರಾಯಣನೆಂದೂ, ಜೀವನ್ಮುಕ್ತನೆಂದೂ, ಮಹಾಜ್ಞಾನಿಯೆಂದೂ ವರ್ಣನೆಯಿದೆ. ಅಗ್ನಿಪುರಾಣದ ಪ್ರಕಾರ ಅವನ ಮಕ್ಕಳಿಬ್ಬರೂ ಪ್ರಿಯವ್ರತ ಮತ್ತು ಉತ್ತಾನಪಾದ. ಪ್ರಿಯವ್ರತನೆಂಬ ಪ್ರಸ್ತಾಪ ಋಗ್ವೇದದಲ್ಲಿದೆ (10, 150, 3). ಆದರೆ ಮಾರ್ಕಂಡೇಯ ಪುರಾಣ (53) ಸ್ವಾಯಂಭುವ ಮನುವಿಗೆ ಹತ್ತುಮಂದಿ ಮಕ್ಕಳೆಂದೂ, ಅವರಿಂದಲೇ ಈ ಭೂಮಿಯೂ ಸಪ್ತದ್ವೀಪಗಳೂ ಪರ್ವತಗಳೂ ಸಮುದ್ರಗಳೂ ವ್ಯವಸ್ಥಿತವಾದುವೆಂದೂ ಹೇಳುತ್ತದೆ. ಇದು ಐತಿಹಾಸಿಕ ವ್ಯಕ್ತಿಯ ಸಾಹಸವಾಗಲಾರದು. ಮತ್ತು, ಮನುಷ್ಯರು ಕಾಣಿಸಿಕೊಳ್ಳುವ ಮೊದಲೇ ಸಿದ್ಧವಾದ ಭೌತಿಕ ಭೂಮಿಕೆಯನ್ನು ಕುರಿತ ವರ್ಣನೆ ಇದು. ಧರ್ಮಶಾಸ್ತ್ರದ ಅಗತ್ಯ ತೋರಿಕೊಳ್ಳುವ ಮೊದಲೇ ಸ್ವಾಯಂಭುವ ಮನುವಿನ ಕಾಲವೆಂದಾಯಿತು. ಹೇಗೂ ಅವನದ್ದು ಮೊದಲ ಮನ್ವಂತರವಷ್ಟೆ?

ಸ್ವಾಯಂಭುವ ಮನ್ವಂತರದ ವೈಶಿಷ್ಟ್ಯವೆಂದರೆ ಯಜ್ಞ ಆ ಕಾಲದಲ್ಲಿ ಅವತರಿಸಿದ್ದು. ಯಜ್ಞವೆನ್ನುವ ಮಾತಿನಲ್ಲಿ ಉಪಾಸನೆಯೂ (ಯಜ್), ತಿಳಿವಳಿಕೆಯೂ (ಜ್ಞ) ಕೂಡಿಕೊಳ್ಳುತ್ತವೆ. ಸೃಷ್ಟಿಕ್ರಮದಲ್ಲಿ ಯಜ್ಞವೇ ಮೊದಲ ಹಂತ ; ಯಜ್ಞದಿಂದಲೇ ಉಳಿದ ಎಲ್ಲವೂ ಉಂಟಾದುವು. ಊರ್ಧ್ವ ಸ್ರೋತಸ್ಸಿನ ದೇವತೆಗಳು ಈ ಯಜ್ಞವನ್ನೇ ಅವಲಂಬಿಸಿದವರು. ಹಾಗೆಂದೇ 'ಯಜ್ಞೇನ ಯಜ್ಞಂ ಅಯಜಂತ ದೇವಾಃ' ಎಂಬ ಒಕ್ಕಣೆಯಿರುವುದು. ಯಜ್ಞವೆಂದರೆ ಈಗಿನ ಅರ್ಥದಂತೆ ಯಾಗಾದಿ ಕರ್ಮ ಎಂದು ತಿಳಿಯಬಾರದು. ವಿಶ್ವನಿಯಮದ, ಕರ್ಮನಿಯತಿಯ, ಸಂಕಲ್ಪ ಸಾಫಲ್ಯದ ಪ್ರತಿಮೆಯೇ ಯಜ್ಞ. ಇದು ಭಗವದ್ಗೀತೆಯಿಂದಲೇ ಸ್ಪಷ್ಟವಾಗುತ್ತದೆ (3, 10, 'ಸಹಯಜ್ಞಾಃ ಪ್ರಜಾಃ ಸೃಷ್ಟ್ವಾ ಪುರೋಽವಾಚ ಪ್ರಜಾಪತಿಃ').

ಮೇಲಿನ ಶ್ಲೋಕದಲ್ಲಿ ಪ್ರಜಾಪತಿಯು ಬ್ರಹ್ಮನೆಂದೂ (ವಲ್ಲಭಾಚಾರ್ಯರು), ಸೃಷ್ಟಿಕರ್ತನೆಂದೂ (ಶಂಕರಾಚಾರ್ಯರು), ಸರ್ವೇಶ್ವರನೂ ವಿಶ್ವದ ಸ್ರಷ್ಟಾರನೂ ವಿಶ್ವಾತ್ಮನೂ ಪರಾಯಣನೂ ಆದ ನಾರಾಯಣನೆಂದೂ (ರಾಮಾನುಜಾಚಾರ್ಯರು) ವಿವರಣೆಗಳಿವೆ. 'ಪುರಾ' ಎಂದರೆ ಸೃಷ್ಟಿಯ ಆರುಂಭದಲ್ಲಿ. ಅವನ ಬಾಯಿಂದ ಉಪದೇಶ ಬಂದುದನ್ನು 'ಉವಾಚ' ಎಂದು ಹೇಳಿದ್ದಾರೆ. ಪ್ರಜಾಪತಿಯ ಮಾತು ಸ್ಮೃತಿ, ಧರ್ಮಶಾಸ್ತ್ರ – 'ಅನೇನ (ಯಜ್ಞೇನ) ಪ್ರಸವಿಷ್ಯಧ್ವಂ' ಇತ್ಯಾದಿ. ಎಂದ ಮೇಲೆ, ಮನ್ವಂತರಾದಿಯ ಸ್ವಾಯಂಭುವ-ಮನುವಿಗೂ ಪ್ರಜಾಪತಿ ಮನುವಿಗೂ ತಾದಾತ್ಮ್ಯವಿದ್ದಿರಬಹುದೇ ?

ಇನ್ನು ವೈವಸ್ವತ ಮನುವಿನತ್ತ ಕಣ್ಣು ಹೊರಳಿಸಬೇಕು. ವೈವಸ್ವತ ಮನುವಿನ ಉಲ್ಲೇಖ ಋಗ್ವೇದವಲ್ಲಿರುವುದನ್ನೂ, ಇಡೀ ಸೂಕ್ತವೊಂದರ ಋಷಿ ವೈವಸ್ವತ ಮನು ಎಂದಿರುವುದನ್ನೂ ಈಗಾಗಲೇ ಹೇಳಿದ್ದೇನೆ. ಮನುವೆಂಬ ವಿಶೇಷಣವಿಲ್ಲದೆ ವೈವಸ್ವತನ ಉಲ್ಲೇಖ ವೈದಿಕಸಾಹಿತ್ಯದಲ್ಲಿ ಬಹಳ ಕಡೆ ಬರುತ್ತದೆ. ಇಲ್ಲಿ ವೈವಸ್ವತನೆಂದರೆ ಯಮ. ಅಥರ್ವವೇದವಂತೂ ಸ್ಪಷ್ಟವಾಗಿ 'ವೈವಸ್ವತ ಪ್ರಹಿತಾನ್ ಯಮದೂತಾನ್' (8, 2. 11) ಎಂದೇ ಪ್ರಸ್ತಾಪ ಮಾಡುತ್ತದೆ. ಇವನನ್ನು ರಾಜನೆಂದಿರುವುದೂ ಉಂಟು. (ಋಗ್ವೇದ, 10, 14, 19 ವೈವಸ್ವತಂ ಸಂಗಮನಂ ಜನಾನಾಂ ಯಮಂ ರಾಜಾನಂ ಹವಿಷಾದುವಸ್ಯ', ಅಥರ್ವ, 6, 116, 1, 'ವೈವಸ್ವತೇ ರಾಜನಿ ತಜ್ಜುಹೋಮಿ'). ಅವನ ಪರಿವಾರದ ಪ್ರಸ್ತಾಪ 'ಓಂ ವೈವಸ್ವತಂ ತರ್ಪಯಾಮಿ, ವೈವಸ್ವತ ಪಾರ್ಷದಾಂಸ್ತರ್ಪಯಾಮಿ' (ಬೌಧಾಯನ ಧರ್ಮ, 2,

5, 9, 11) ಎನ್ನುವಾಗ ಬರುತ್ತವೆ. ವೈವಸ್ವತನನ್ನು ಮನು ಮತ್ತು ರಾಜ ಎಂಬ ಎರಡೂ ವಿಶೇಷಣಗಳೊಂದಿಗೆ ಶತಪಥಬ್ರಾಹ್ಮಣ ಹೇಳಿರುವುದಿದೆ (13, 4, 3, 3 'ಮನುರ್ವೈವಸ್ವತೋ ರಾಜಾ ತಸ್ಯ ಮನುಷ್ಯಾ ವಿಶಸ್ತ ಇಮ ಆಸತೇ ಋಚೋ ವೇದಃ ಸೋಽಯಂ') ಯಮಧರ್ಮರಾಜನೆಂಬುವ ಪ್ರಯೋಗ ಈಗಂತೂ ಬಳಕೆ ಯಲ್ಲಿದೆಯಷ್ಟೆ. ಮರಣಕ್ಕೆ ದೇವತೆಯಾದ ಯಮನಿಗೂ ಬದುಕಿಗೆ ಅಗತ್ಯವಾದ ಧರ್ಮಕ್ಕೂ ನಂಟು ಒದಗಿದುದು ಹೇಗೆ ?

ಸ್ವಾಯಂಭುವ ಮನ್ವಂತರದಲ್ಲಿ ಯಮನೇ ಮೊದಲಾದವರು ದೇವತೆಗಳು. ಮೊದಲಲ್ಲೇ ಕಾಣಿಸಿಕೊಂಡ ಇಪ್ಪತ್ತೊಂದು ಪ್ರಜಾಪತಿಗಳನ್ನು ಮಹಾಭಾರತ (ಮೋಕ್ಷ ಧರ್ಮ) ಪಟ್ಟಿ ಮಾಡುವಾಗ 'ಬ್ರಹ್ಮ, ಸ್ಥಾಣು, ಮನು, ದಕ್ಷ, ಧರ್ಮ, ಯಮ, ವಿವಸ್ವಾನ್......' ಎಂದು ಬೇರೆಬೇರೆಯಾಗಿ ಸೂಚಿಸುತ್ತದೆ. ಯಮನೂ ವೈವಸ್ವತ ಮನುವೂ ಸೋದರರು ಎಂದು ಹೇಳುವುದೂ ಉಂಟು. ನಿರುಕ್ತಕಾರರು ಉಲ್ಲೇಖಿಸುವ ಇತಿಹಾಸವೊಂದು (12, 10 ; ಋಗ್ವೇದ 10, 17, 2ನ್ನು ಕುರಿತು) ಹೇಳುವುದು ಹೀಗೆ—ತ್ವಷ್ಟೃವಿನ ಮಗಳಾದ ಸರಣ್ಯೂ ಎಂಬವಳು ಆದಿತ್ಯನಾದ ವಿವಸ್ವತನೊಂದಿಗೆ ಕೂಡಿಕೊಂಡು ಯಮ-ಯಮಿಯರನ್ನು ಪಡೆದಳು. ಅನಂತರ ಸರಣ್ಯು ತನ್ನಂತೆಯೇ ಇರುವ (ಸವರ್ಣಾಂ) ಬೇರೊಬ್ಬ ಸ್ತ್ರೀಯನ್ನು ತನ್ನ ಪ್ರತಿನಿಧಿ ಯಾಗಿ ವಿವಸ್ವತನ ಬಳಿಯಿರಿಸಿ, ಕುದುರೆಯ ರೂಪವನ್ನು ಧರಿಸಿ ಓಡಿಹೋದಳು. ಆಗ ವಿವಸ್ವತನು ತಾನೂ ಕುದುರೆಯ ರೂಪವನ್ನು ಧರಿಸಿ ಅವಳ ಬೆನ್ನಟ್ಟಿಹೋದನು. ಆ ಸಂದರ್ಭದಲ್ಲಿ ಹುಟ್ಟಿದವರು ಅಶ್ವಿನೀದೇವತೆಗಳು. ವಿವಸ್ವತನು ಸರಣ್ಯುವಿನ ಪ್ರತಿನಿಧಿಯಾಗಿ ತನ್ನಲ್ಲಿ ಉಳಿದುಕೊಂಡವಳಲ್ಲಿ ಮನುವನ್ನು ಪಡೆದನು. ("ಸರಣ್ಯಾ-ಯಾಂ ಮನುಃ"). ಋಗ್ವೇದ ಮಂತ್ರದಲ್ಲಿ ವಿವಸ್ವತನು ಅಶ್ವಿನೀ ದೇವತೆಗಳನ್ನು ಪಡೆದುಕೊಂಡುದೂ, ಯಮ-ಯಮಿಯರೆಂಬ ಅವಳಿಮಕ್ಕಳನ್ನು (ಮಿಥುನಾ) ಪಡೆದುಕೊಂಡುದೂ ಇದೆ; ಮನುವಿನ ಪ್ರಸ್ತಾಪ ಅಲ್ಲಿಲ್ಲ. ಇದು ಯಾಸ್ಕರು ಉಲ್ಲೇಖಿಸಿದ ಇತಿಹಾಸದಲ್ಲಿ ಬರುವ ವಿವರ.

ಪುರಾಣಗಳಲ್ಲಿ ಏಳನೆಯ ಮನ್ವಂತರದ ವೈವಸ್ವತ ಮನುವು ಸೂರ್ಯನಿಂದ ಸಂಜ್ಞೆ ಪಡೆದುಕೊಂಡ ಮಗನೆಂದೂ, ಸೂರ್ಯನಿಂದ ಛಾಯೆ ಪಡೆದುಕೊಂಡ ಮಗ ಸಾವರ್ಣಿಯೆಂಬ ಎಂಟನೆಯ ಮನ್ವಂತರದ ಮನುವೆಂದೂ ವಿವರಣೆ ಬರು ತ್ತದೆ. ಋಗ್ವೇದವು ಸರಣ್ಯು ಎಂದು ಕರೆದಿರುವ ತ್ವಾಷ್ಟ್ರಿಯೇ (ಎಂದರೆ ತ್ವಷ್ಟೃವಿನ

ಮಗಳೇ) ಪುರಾಣಗಳಲ್ಲಿ ಸಂಜ್ಞೆ. ಆಕೆ ತನ್ನ ರೂಪನ್ನೇ ಪಡೆದ ಹುಡುಗಿಯೊಬ್ಬಳನ್ನು ಸೂರ್ಯನ ಬಳಿ ಇರಿಸಿದಳಲ್ಲ, ಅವಳನ್ನು ವೇದ 'ಸವರ್ಣಾ' ಎಂದು ಕರೆದಿದೆ; ಅದೇ ರೂಪದವಳು ಎಂದರ್ಥ. ಇವಳನ್ನೇ ಪುರಾಣವು ಸಂಜ್ಞೆಯ 'ನೆರಳು' (ಛಾಯೆ) ಎಂದು ಕರೆದಿದೆ. ಸವರ್ಣೆಯಲ್ಲಿ ಹುಟ್ಟಿದವನು ಸಾವರ್ಣಿ, ಎಂದರೆ ವೈವಸ್ವತ ಮನುವಿನ ಸೋದರ.

ವೈವಸ್ವತನೆಂದರೆ ವಿವಸ್ವತನ ಮಗ. ವಿವಸ್ವಾನ್ ಎನ್ನುವುದು ಸೂರ್ಯನ ಹೆಸರು. ರಘುವಂಶದ ವ್ಯಾಖ್ಯಾನಕಾರರಾದ ವಿಜಯಗಣಿಗಳ ಪ್ರಕಾರ ಯಾರಲ್ಲಿ ಕಿರಣಗಳು (ವಿವಸಃ ರಶ್ಮಯಃ) ಇವೆಯೋ ಅವನು ವಿವಸ್ವಾನ್. 'ವಸ ನಿವಾಸೇ' ಎಂಬ ಧಾತುವಿನಿಂದ, ಎಲ್ಲ ಪ್ರಾಣಿಗಳಲ್ಲೂ ಕಾಣಿಸಿಕೊಳ್ಳದೆ ಅಡಗಿಕೊಂಡು ನೆಲೆಯಾಗಿರುತ್ತಾನೆಯಾಗಿ ಹರಿಯನ್ನು ಸೂಚಿಸುವ ಪದ ಎಂದು ಸಾಂಬಪುರಾಣದಲ್ಲಿ ಬರುವ ವಿವರಣೆ (9, 33, 'ವಸತಿ ಅದೃಷ್ಟಃ ಸರ್ವೇಷು ಭೂತೇಷು ಅಂತರ್ಹಿತೋ ಹರಿಃ'). ಬೇರೆಬೇರೆಯಾದ ಬಟ್ಟೆಗಳಿಗೆ 'ವಿವಃ' ('ವಿವಿಧಂ ವಸನಂ') ಎಂದು ಹೆಸರು : ಹಾಗೆ ಉಳ್ಳವನು 'ವಿವಸ್ವತ್'. ಹೀಗೆ ಬೇರೆಬೇರೆಯಾಗಿ ಬಟ್ಟೆಗಳನ್ನು ತೊಡುವವರು ಮನುಷ್ಯರು. ಆದುದರಿಂದ ವಿವಸ್ವತನೆಂದರೆ ಮನುಷ್ಯ ಎಂದು ನಿಘಂಟು (2, 3, 24) ಸೂಚಿಸುತ್ತದೆ. ವಿಶೇಷವಾಗಿ ಮರೆಮಾಚುವವನು, ಮುಚ್ಚುವವನು ('ವಿಶೇಷೇಣ ವಸ್ತೇ ಆಚ್ಛಾದಯತಿ') ಮತ್ತು ಬೆಳಗುವ ತೇಜಸ್ಸುಳ್ಳವನು ('ವಿವಃ ತೇಜಃ ಅಸ್ಯಾಸ್ತಿ') ಎಂಬರ್ಥದಲ್ಲಿ ವಿವಸ್ವತನೆಂದರೆ ಸೂರ್ಯನೆಂದು ಬಗೆಯುವುದೇ ವಾಡಿಕೆ. ವೈದಿಕ ಸಾಹಿತ್ಯದಲ್ಲಿ ಹರಡುವ ಬೆಳಕುಳ್ಳ ಉಷಸ್ಸಿಗೂ ಅಗ್ನಿಗೂ ವಿವಸ್ವತನೆಂಬ ಹೆಸರಿದೆ. ಋಗ್ವೇದದಲ್ಲಿ ಸದನೇ ವಿವಸತಃ ಎಂದರೆ 'ಅಗ್ನಿಯ ನೆಲೆಯಲ್ಲಿ', ಎಂದೇ ಅರ್ಥ. ವಿವಸ್ವತನ ಮಗ ವೈವಸ್ವತ ('ವಿವಸ್ವತಃ ಅಪತ್ಯಂ ಇತಿ ಅಣ್') ವರ್ತಮಾನ ಮನ್ವಂತರಾಧಿಪತಿಯಾದ ಮನು.

ಸೂರ್ಯನ ಮಗನಾದ ಯಮನನ್ನೇ ಮನುವೆಂದು ಕರೆದಿರುವ ಉಲ್ಲೇಖಗಳೂ ಪುರಾಣಗಳಲ್ಲಿ ಬರುತ್ತವೆ. ನಿದರ್ಶನಕ್ಕೆ ಮತ್ಸ್ಯಪುರಾಣದಲ್ಲಿ 'ವಿವಸ್ವತಃ ಸುತೋ ಶ್ರಾದ್ಧದೇವೋ ಮಹಾದ್ಯುತಿಃ ಮನುಃ ಸ ವರ್ತತೇ ಶ್ರೀಮಾನ್ ಸಾಂಪ್ರತಂ ಸಪ್ತಮೇಽಂತರೇ' ಎಂದಿದೆ. ಈ ಮನ್ವಂತರದಲ್ಲಿ ಆದಿತ್ಯ–ವಸು–ರುದ್ರರೇ ಮೊದಲಾದವರು ದೇವತೆಗಳಂತೆ. ಶ್ರಾದ್ಧಕಾಲದ ವಿಧಿಗಳಲ್ಲಿ ಪಿತೃವನ್ನು ಪ್ರತಿನಿಧಿಸಿ ವಸುವನ್ನೂ, ಪಿತಾಮಹರನ್ನು ಪ್ರತಿನಿಧಿಸಿ ರುದ್ರನನ್ನೂ, ಪ್ರಪಿತಾಮಹರನ್ನು

ಪ್ರತಿನಿಧಿಸಿ ಆದಿತ್ಯರನ್ನೂ ತೃಪ್ತಿಪಡಿಸುವ ಪರಿಪಾಟಿಯಿರುವುದನ್ನು ಗಮನಿಸಬೇಕು. ವೈವಸ್ವತನೆಂದರೆ ದಿಟವಾಗಿ ಮೃತ್ಯುದೇವತೆಯೇ, ಶ್ರಾದ್ಧದೇವನೇ ಎಂಬ ಸೂಚನೆ ಬರದೆ ಇರದು, ಋಗ್ವೇದದಲ್ಲಿ (10, 60, 10) 'ಯಮಾದಹಂ ವೈವಸ್ವತಾತ್' ಎಂದು ಮೊದಲಾಗುವ ಮಂತ್ರವೇ ಇದೆ.

ವೈವಸ್ವತ ಯಮನನ್ನು ಕಾಲನೆಂದೂ ದಂಡಧರನೆಂದೂ ಅಮರಕೋಶ ಹೇಳುತ್ತದೆ ; ಶಬ್ದರತ್ನಾವಳಿಯಲ್ಲಿ ಅವನನ್ನು ಧರ್ಮ, ಧರ್ಮರಾಟ್, ಜೀವಿತೇಶನೆಂದು ಹೇಳಿದೆ. ಅಗ್ನಿಪುರಾಣದಲ್ಲಿ ಬರುವ ಯಮ-ಶರ್ಮಿಳೋಪಾಖ್ಯಾನ 'ಧರ್ಮಾಧರ್ಮವಿನಿರ್ಣಯೇ ಪ್ರಮಾಣಂ ತ್ವಂ ಹಿ ಲೋಕಾನಾಂ' ಎನ್ನುವ ಮಾತನ್ನೊಳಗೊಂಡಿದೆ. ಬ್ರಹ್ಮವೈವರ್ತಪುರಾಣದಲ್ಲಿ (ಪ್ರಕೃತಿ ಖಂಡ, 26) ಸೂರ್ಯನು ಪುಷ್ಕರದಲ್ಲಿ ಧರ್ಮವನ್ನು ಆರಾಧಿಸಿ, ತಪಸ್ಸುಮಾಡಿ ಧರ್ಮದ ಅಂಶವೇ ಆದ ಈ ಮಗನನ್ನು ಪಡೆದನೆಂದೂ ಆದಕಾರಣ ಇವನು ಧರ್ಮರಾಜನೆಂದೂ ವಿವರವಿದೆ. ('ತಪಸಾ ಧರ್ಮಮಾರಾಧ್ಯ ಪುಷ್ಕರೇ ಭಾಸ್ಕರಃ ಪುರಾ । ಧರ್ಮಾಂಶಂ ಯಂ ಸುತಂ ಪ್ರಾಪ ಧರ್ಮರಾಜಂ ನಮಾಮ್ಯಹಂ॥' ಇದು ಸಾವಿತ್ರಿಯು ರಚಿಸಿದ ಯಮಾಷ್ಟಕದಲ್ಲೊಂದು ಚರಣ) ಮತ್ತು ಅಲ್ಲೇ ಯಮಧರ್ಮರಾಜನನ್ನು ತಪಸ್ವಿಯೆಂದೂ ಧರ್ಮಿಯೆಂದೂ ಸಂಯಮಿಯೆಂದೂ ವಿಜಿತೇಂದ್ರಿಯನೆಂದೂ ವರ್ಣಿಸಿರುವುದಿದೆ.

ಭಗವದ್ಗೀತೆಯಲ್ಲಿ ಕೃಷ್ಣನು ತಾನು ಮೊದಲಲ್ಲಿ ('ಅದೌ' ಎಂದರೆ ಸರ್ಗಾದಿಯಲ್ಲಿ, ಸೃಷ್ಟಿಯ ಮೊದಲಲ್ಲಿ) ಯೋಗವನ್ನು (ಎಂದರೆ ಕರ್ಮಯೋಗವನ್ನು) ವಿವಸ್ವತನಿಗೆ ಹೇಳಿದುದಾಗಿ, ಅದನ್ನೇ ವಿವಸ್ವತನು ಮನುವಿಗೆ ಹೇಳಿದುದಾಗಿ, ಮನುವು ಇಕ್ಷ್ವಾಕುವಿಗೆ ಹೇಳಿದುದಾಗಿ ಮಾತಿದೆಯಷ್ಟೆ (4, 1). ಇಲ್ಲಿ ವಿವಸ್ವತನು ಯಾರು ? ಮನುವು ಯಾರು ? ಶಂಕರಾಚಾರ್ಯರೂ ರಾಮಾನುಜಾಚಾರ್ಯರೂ ಇತರರೂ ವಿವಸ್ವತನೆಂದರೆ ಸೂರ್ಯನೆಂದೇ ಅರ್ಥ ಹೇಳಿದ್ದಾರೆ. ಈ ವಿವಸ್ವತನನ್ನು ವೇದಾಂತದೇಶಿಕರು 'ಸರ್ವವೇದಾತ್ಮ'ನೆಂದೂ, ಬ್ರಹ್ಮಾನಂದಗಿರಿ ವ್ಯಾಖ್ಯಾನಕಾರರು 'ಸರ್ವಕ್ಷತ್ರಿಯವಂಶ ಬೀಜ'ನೆಂದೂ, ಕೇಶವ ಕಾಶ್ಮೀರಿಗಳು 'ಜಗದ್ಯಾತ್ರಾನಿರ್ವಾಹಕ'ನೆಂದೂ ವಿವರಿಸಿದ್ದಾರೆ. 'ಸರ್ವಕ್ಷತ್ರಿಯವಂಶಬೀಜ'ವೆಂಬ ವಿವರಣೆಗೆ ಮೂಲ ಶಂಕರಾಚಾರ್ಯರು ಮಾಡಿರುವ ಸಂದರ್ಭಸೂಚನೆ. ಅವರ ಭಾಷ್ಯದಲ್ಲಿ ಬರುವ ಸೂಚನೆ ಹೀಗೆ—ಕ್ಷತ್ರಿಯರು ಜಗತ್ತನ್ನು ಪಾಲಿಸುವವರು : ಅವರಿಗೆ ಬಲವನ್ನೊದಗಿಸಬೇಕೆಂಬುದು ಕೃಷ್ಣನ ಆಶಯ. ಯೋಗದ ಬಲದಿಂದ ಕ್ಷತ್ರಿಯರು ಬ್ರಹ್ಮನನ್ನು

ಕಾಪಾಡಲು ಸಮರ್ಥರಾಗುತ್ತಾರೆ, ಬ್ರಹ್ಮವೂ ಕ್ಷತ್ರವೂ ಪಾಲಿಸಲ್ಪಟ್ಟರೆ ಜಗತ್ತು ರಕ್ಷಿತವಾದಂತೆಯೇ. ಆದ್ದರಿಂದ ಈ ಯೋಗವು 'ಕ್ಷತ್ರಿಯಪರಂಪರಾಪ್ರಾಪ್ತ' ವಾದುದು.

ಅವರ ವಿವರಣೆಗೆ ಸಮರ್ಥನೆಯಂತೆ ಗೀತೆಯಲ್ಲಿ ಮುಂದೆ ಹೀಗೆ ಪರಂಪರಾ ಪ್ರಾಪ್ತವಾದ ಯೋಗವನ್ನು ಅರಿತುಕೊಂಡವರು 'ರಾಜರ್ಷಿಗಳು' ಎಂದರೆ ಬ್ರಹ್ಮ-ಕ್ಷತ್ರ ಎರಡನ್ನೂ ಅಳವಡಿಸಿಕೊಂಡಿದ್ದವರು. ವೇದಾಂತದೇಶಿಕರು "ರಾಜರೆಂದರೆ ವಿಸ್ತೀರ್ಣಾಗಾಧಮನಸ್ಸುಳ್ಳವರು. ಅವರಲ್ಲೂ ಋಷಿಗಳೆಂದರೆ ಅತೀಂದ್ರಿಯಾರ್ಥ ದರ್ಶನಕ್ಷಮರು" ಎಂದು ಬರೆಯುತ್ತಾರೆ. ವಿವಸ್ವತನಾಗಲೀ ಮನುವಾಗಲೀ ರಾಜರಲ್ಲ. ಮನುವಿನ ಮಗ ಇಕ್ಷ್ವಾಕುವೇ ಮೊದಲ ರಾಜ (ಇಕ್ಷ್ವಾಕವೇ ಸ್ವಪುತ್ರಾಯ ಆದಿರಾಜಾಯ) ಎಂದು ಶಂಕರಾಚಾರ್ಯರ ವಿವರಣೆ. ಇಲ್ಲಿ ಬರುವ ಮನು ವಿವಸ್ವತನ (ಸೂರ್ಯನ) ಮಗ ಸತ್ಯವ್ರತನೆಂದು ಕೇಶವ ಕಾಶ್ಮೀರಿಗಳು ; ಶ್ರಾದ್ಧ ದೇವನೆಂದು ಶ್ರೀಧರರೂ, ರಾಘವೇಂದ್ರಸ್ವಾಮಿಗಳೂ; ಎಂದರೆ, ಮನುವೈವಸ್ವತ ಯಮನೇ, ಅವನು ಧರ್ಮರಾಜ, ಅವನ ಮಗ ಇಕ್ಷ್ವಾಕು ಕ್ಷತ್ರಿಯ, ಮನುಷ್ಯರಾಜ ; ಅಯೋಧ್ಯೆಯಲ್ಲಿ ಆಳತೊಡಗಿದವನು, ರಘುವಂಶದ ಮೂಲಪುರುಷ.

ಇತಿಹಾಸದಲ್ಲಿ ಗಟ್ಟಿಯಾಗಿ ನಿಲ್ಲಬಲ್ಲವನು ಇಕ್ಷ್ವಾಕುವೇ. ಅವನ ತಂದೆ ಯಮ (ಮನು–ವೈವಸ್ವತ) ನಾಗಲೀ, ಅವನ ತಂದೆ ಸೂರ್ಯ (ವಿವಸ್ವತ) ನಾಗಲೀ ಚರಿತ್ರೆಯ ಪರಿಶೀಲನೆಗೆ ಅಷ್ಟಾಗಿ ದಕ್ಕುವವರಲ್ಲ. ಸೂರ್ಯನಿಂದ ಜಗತ್ತು ಸಿದ್ಧ ವಾಯಿತು, ಅನಂತರ ಯಮನಿಂದ ಧರ್ಮದ ವ್ಯವಸ್ಥೆಯಾಯಿತು ಎಂದು ಹೇಳು ವುದಷ್ಟೆ, ಇಕ್ಷ್ವಾಕುವಿನ ಪೂರ್ವಪರಂಪರೆಯ ಉದ್ದೇಶ. ಇಕ್ಷ್ವಾಕುವೆಂಬ ಪ್ರಾಚೀನ ರಾಜನ ಉಲ್ಲೇಖ ಋಗ್ವೇದದಲ್ಲಿದೆ (10, 60, 4 'ಯಸ್ಯೇಕ್ಷ್ವಾಕು ರೂಪವ್ರತೇ'); ಅಲ್ಲಿ ಅವನನ್ನು ಧನವಂತನೆಂದೂ ('ರೇವಾನ್') ಶತ್ರುಮಾರಕನೆಂದೂ ('ಮರಾಯಿ') ಬಣ್ಣಿಸಲಾಗಿದೆ ; ಅವನಿಗೆ ಪ್ರಜಾರಕ್ಷಣೆ ವ್ರತವಾಗಿದ್ದುದೂ ಪ್ರಸ್ತಾಪಕ್ಕೆ ಬರುತ್ತದೆ. ಈ ರಾಜನ ಉಲ್ಲೇಖ ಅಥರ್ವವೇದದಲ್ಲೂ (19, 39, 9) ಬಂದಿದೆ. ಮತ್ತೆ ಮಹಾಭಾರತ, ರಾಮಾಯಣ, ಭಾಗವತ, ಹರಿವಂಶ, ವಾಯುಪುರಾಣ, ಮೊದಲಾದ ಗ್ರಂಥಗಳಲ್ಲಂತೂ ಇವನ ಉಲ್ಲೇಖ ಇದ್ದೇ ಇದೆ. ಕಾಳಿದಾಸನು ರಘುವಂಶದ ರಾಜರಿಗೆ ಇಕ್ಷ್ವಾಕುವೇ ಮೂಲಪುರುಷನೆಂದು ಅಡಿಗಡಿಗೆ ಹೇಳುತ್ತಾನೆ. (1, 72 ; 3, 70 ; 5, 55 ; 6, 71 ; 12, 20 ; 13, 61

ಮತ್ತು 70 ; 14, 55 ; 15, 44 ಮತ್ತು 49). ಕವಿಯು ವೈವಸ್ವತ ಮನುವಿನ ಪ್ರಸ್ತಾಪಮಾಡಿರುವುದು ಒಂದೇ ಬಾರಿ (1, 11). ಅವನು ಭೂಮಿಯ ಮೇಲೆ ರಾಜರಲ್ಲಿ ಮೊದಲಿಗ ಎಂದಷ್ಟೆ ('ಮಹೀಕ್ಷಿತಾಂ ಆದ್ಯಃ'), ಸೂರ್ಯವಂಶದ ರಾಜರಲ್ಲಿ ಮೊದಲಿಗ ಎಂದಲ್ಲ.

(೭)

ಭಾಗವತವೇ ಮೊದಲಾದ ಪುರಾಣಗಳಲ್ಲಿ ವೈವಸ್ವತ ಮನುವಿಗೆ ಇಕ್ಷ್ವಾಕು ವಲ್ಲದೆ ನೃಗ, ಶರ್ಯಾತಿ, ದಿಷ್ಟ, ಧೃಷ್ಟ, ಕರೂಷಕ, ಸರಿಷ್ಯಂತ, ಪೃಷಘ್ನ, ನಾಭಾಗ, ಕವಿ ಎಂಬ ಒಂಬತ್ತು ಮಕ್ಕಳು ಇದ್ದಂತೆ ನಿರೂಪಣೆಯಿದೆ; ಮಾರ್ಕಂಡೇಯ ಪುರಾಣ ಕವಿಯನ್ನು ಹೆಸರಿಸುವುದಿಲ್ಲ. ಇವರಲ್ಲಿ ನಾಭಾಗನಿಗೆ ಇನ್ನೊಂದು ಹೆಸರು ನಾಭಾನೇದಿಷ್ಠನೆಂದು. ಇವನು ಋಗ್ವೇದದ ಸೂಕ್ತಕಾರ ಋಷಿ. (10, 61 ಮತ್ತು 72). ಇಲ್ಲಿ ಇವನನ್ನು 'ನಾಭಾನೇದಿಷ್ಠೋ ಮಾನವಃ' ಎಂದು ಹೆಸರಿಸಿದೆ. ಇವನ ಇತಿಹಾಸ ಐತರೇಯ ಬ್ರಾಹ್ಮಣದಲ್ಲಿ (22. 24) ಬರುತ್ತದೆ. ವೈವಸ್ವತ ಮನುವಿನ ಮಗನಾದ ಇವನು ಎಳೆತನದಲ್ಲಿ ವೇದಾಧ್ಯಯನ ಮಾಡುತ್ತ ಗುರುಕುಲ ದಲ್ಲಿದ್ದನಂತೆ ; ಇವನಿಗೆ ಹಣದಮೇಲೆ ಮಮತೆ ಇಲ್ಲದಿರುವುದನ್ನು ಅರಿತು ಇವನ ಸೋದರರು ತಂದೆಯ ಆಸ್ತಿಯನ್ನೆಲ್ಲ ತಮ್ಮೊಳಗೆ ಹಂಚಿಕೊಂಡುಬಿಟ್ಟರಂತೆ. ಬ್ರಹ್ಮ ಚರ್ಯೆ ಮುಗಿಸಿ ನಾಭಾನೇದಿಷ್ಠನು ಹಿಂದಿರುಗಿ ಬಂದು, ತನ್ನ ಪಾಲಿನ ಆಸ್ತಿಯನ್ನು ಕೊಡಿರೆಂದು ಸೋದರರನ್ನು ಕೇಳಲು ಅವರು "ನಮಗೇನೂ ತಿಳಿಯದು ; 'ಧರ್ಮ ರಹಸ್ಯಪ್ರಣೇತಾರ' (ನಿಷ್ಠಾವಃ)ನಾದ ತಂದೆಯನ್ನೇ ಕೇಳು" ಎಂದುಬಿಟ್ಟರಂತೆ. ಹಾಗೆ ಅವನು ತಂದೆಯನ್ನು ಕೇಳಲು, ತಂದೆ ಮಗನನ್ನು ಅಂಗಿರಾ ಋಷಿಗಳು ಮಾಡುತ್ತಿದ್ದ ಸತ್ರಯಾಗವೊಂದಕ್ಕೆ ಕಳುಹಿಸುತ್ತಾನೆ. ಅಲ್ಲಿ ನಾಭಾನೇದಿಷ್ಠನು 'ಪ್ರತಿಗೃಭ್ಣೀತ ಮಾನವಂ ಸುಮೇಧಸಃ' (10, 62, 1 ರಿಂದ 4) ಎಂದು ಪ್ರಾರ್ಥನೆ ಸಲ್ಲಿಸುತ್ತಾನೆ.

ಕೃಷ್ಣಯಜುರ್ವೇದದ ತೈತ್ತಿರೀಯ ಸಂಹಿತೆಯಲ್ಲೂ (3. 1, 9 ; 4. 5, 6, 7) ಇದೇ ಕಥೆ ಬಂದಿದೆ. ಈ ಇತಿಹಾಸದ ಸ್ವಾರಸ್ಯ ವೈವಸ್ವತ ಮನು ರಾಜ ನಾಗಿರದೆ ಋಷಿಯಾಗಿಯೇ ಇದ್ದುದು. ಅವನ ಮಗ ನಾಭಾನೇದಿಷ್ಠನೂ ತಂದೆ ಯಂತೆಯೇ ಋಷಿಯಾದುದು. ಇಲ್ಲಿ ನಾಭಾನೇದಿಷ್ಠ ಸೂಕ್ತಗಳಿಗೆ (61ನೇ ಸೂಕ್ತ ದಲ್ಲಿ 27 ಮಂತ್ರಗಳು, 62ನೆಯ ಸೂಕ್ತದಲ್ಲಿ 10 ಮಂತ್ರಗಳು) ವಿಶ್ವೇದೇವತೆಗಳೇ

ದೇವತೆಗಳು. ವೈವಸ್ವತ ಮನುವೇ ದ್ರಷ್ಟಾರನಾಗಿರುವ ಇನ್ನೊಂದು ಸೂಕ್ತಕ್ಕೂ (8, 27) ವಿಶ್ವೇದೇವತೆಗಳೇ ದೇವತೆಗಳು. ಹೀಗೆ ತಂದೆಮಕ್ಕಳಿಬ್ಬರೂ ಮಂತ್ರ ದ್ರಷ್ಟಾರರಾದ ಋಷಿಗಳಾಗಿದ್ದವರು ಎನ್ನುವ ಉಲ್ಲೇಖ ಸ್ಪಷ್ಟವಾಗಿ ಬಂದಿರುವಾಗ ವೈವಸ್ವತ ಮನು ದಿಟವಾಗಿ ವ್ಯಕ್ತಿಯೇ ಎಂದೂ, ಧರ್ಮವ್ಯವಸ್ಥೆಯನ್ನು ಮಾಡಿದವನು ಎಂದೂ ಸಿದ್ಧವಾಗುವುದಿಲ್ಲವೇ ? ಇತಿಹಾಸದ ಹಿಡಿತಕ್ಕೇನೋ ಸಿಗುವುದಿಲ್ಲವೆನ್ನಿ.

ಇದಲ್ಲದೆ, ಎರಡನೆಯ ನಾಭಾನೇದಿಷ್ಠಸೂಕ್ತದಲ್ಲಿ ನಾಲ್ಕು ಮಂತ್ರಗಳು (10. 62, 8–11) ಸಾವರ್ಣಿಯ ದಾನವನ್ನು ಸ್ತುತಿಸುವುವು. ಇಲ್ಲಿ ಸಾವರ್ಣಿ ಯನ್ನು ಮನುವೆಂದೇ ಕರೆದಿದೆ. ('ಅಯಂ ಮನುಃ', 8, 'ಸಾವರ್ಣ್ಯಸ್ಯ', 9, 'ಸಾವರ್ಣೇಃ', 11) ಸವರ್ಣೆಯ ಮಗ ಸಾವರ್ಣಿ ; ಸವರ್ಣೆಯೆಂಬುವಳು ವಿವಸ್ವತನ (ಸೂರ್ಯನ) ಹೆಂಡತಿಯಾದ ತ್ವಾಷ್ಟ್ರಿಯ ಪ್ರತಿನಿಧಿ ಅಥವಾ ಛಾಯೆ ಯೆಂಬ ವಿಚಾರ ಆಗಲೇ ಬಂದಿದೆ. ಸಾವರ್ಣಿಯು ಮನು–ವೈವಸ್ವತನ ಮಲತಮ್ಮ ನೆಂದಾಯಿತು, ಎಂದರೆ ನಾಭಾನೇದಿಷ್ಠ ಋಷಿಯು ಚಿಕ್ಕಪ್ಪ. ಇವನ ದಾನಸ್ತುತಿ ಇಲ್ಲಿ ಬಂದಿರುವುದು ಸಹಜವೇ. ಮುಂಬರುವ ಮನ್ವಂತರದ ಮನು ಸಾವರ್ಣಿಯೇ. ಆದರೆ ಇಲ್ಲಿ ಇವನನ್ನು 'ಮನು' ಎಂದಿರುವುದು ಉತ್ತಮ ಮನುಷ್ಯನೆಂಬರ್ಥ ದಲ್ಲಿಯೇ.

ವೈವಸ್ವತ ಮನುವಿಗೆ ಇತಿಹಾಸದ ಕಳೆಯನ್ನು ಮೂಡಿಸಲು ಮತ್ತೂ ಒಂದು ವಿವರವಿದೆ. ವೈವಸ್ವತ ಮನುವಿನ ಮಗಳು ಇಳಾ ಎಂಬುವಳ ವಿಚಾರ ಭಾಗವತ ದಲ್ಲಿ ಬರುತ್ತದೆ. ಮೊದಲು ಇಳೆ ಗಂಡಸಾಗಿದ್ದಳೆಂದೂ ಶಂಕರಶಪ್ತವಾದ ವನ ವೊಂದನ್ನು ಪ್ರವೇಶಿಸಿದ ತಪ್ಪಿಗಾಗಿ ಹೆಣ್ಣಾದಳೆಂದು ಕಥೆ. ಇಳನು (ಸುದ್ಯುಮ್ನ ನೆಂದು ಮೊದಲು ಹೆಸರು) ಇಳೆಯಾದಮೇಲೆ ಸೋಮನ ಮಗನಾದ ಬುಧನು ಅವಳನ್ನು ವರಿಸಿ ಪುರೂರವನೆಂಬ ಮಗನನ್ನು ಪಡೆದನಂತೆ. ಸೋಮನು 'ರಾಜ' ನೆಂದು ಪ್ರಸಿದ್ಧನಾದುದರಿಂದ ಅವನ ಮಗ ಬುಧನು ರಾಜಪುತ್ರನೆಂದು ಮತ್ಸ್ಯ ಪುರಾಣದ ವಿವರಣೆ. ('ರಾಜ್ಞಃ ಸೋಮಸ್ಯ ಪುತ್ರತ್ವಾತ್ ರಾಜಪುತ್ರೋ ಬುಧಃ ಸ್ಮೃತಃ'). ಇದು ಚಂದ್ರವಂಶದ ಅರಸರ ಮೂಲ. ಅದು ಹಾಗಿರಲಿ, ವೈವಸ್ವತ ಮನುವಿನ ಕುಲಪುರೋಹಿತನಾದ ವಸಿಷ್ಠನು ಶಂಕರನನ್ನು ತಪಸ್ಸಿನಿಂದ ಮೆಚ್ಚಿಸಿ, ವೈವಸ್ವತ ಮನುವಿನ ಮಗನು ಒಂದು ತಿಂಗಳು ಗಂಡಾಗಿಯೂ, ಒಂದು ತಿಂಗಳು ಹೆಣ್ಣಾಗಿಯೂ ಮಾರ್ಪಡುವ ವರವನ್ನು ಪಡೆದನಂತೆ. ಇವನು ಪಡೆದುಕೊಂಡದ್ದು ಇಳಾವೃತವೆನಿಸಿಕೊಂಡಿತು.

ಇಲ್ಲಿ ಒಂದು ಗೊಂದಲವು ಇದೆಯೆನ್ನಿ. ಸ್ವಾಯಂಭುವ ಮನುವಿನ ಮಗ ಪ್ರಿಯವ್ರತ; ಪ್ರಿಯವ್ರತನ ಮಗ ಅಗ್ನೀಧ್ರ; ಅಗ್ನೀಧ್ರನ ಮಗ ಇಳನೆಂದೂ, ತಂದೆಯಿಂದ ಇವನು ಪಡೆದುಕೊಂಡ ಪ್ರದೇಶವೇ ಇಳಾವೃತವೆಂದೂ ಪುರಾಣಗಳಲ್ಲಿ ಒಂದು ಒಕ್ಕಣೆಯಿದೆ. ಇದು ಹೇಗಾದರೂ ಇರಲಿ. ಇಳಾವೃತ ಜಂಬೂದ್ವೀಪದ ನವವರ್ಷಗಳಲ್ಲೊಂದು; ಸುಮೇರು ಪರ್ವತದ ಸುತ್ತ ಇರುವ ಈ ಪ್ರದೇಶಕ್ಕೆ ಉತ್ತರದ ಗಡಿ ನೀಲಪರ್ವತ; ದಕ್ಷಿಣಕ್ಕೆ ನಿಷಧ; ಪಶ್ಚಿಮಕ್ಕೆ ಮಾಲ್ಯವಂತ; ಪೂರ್ವಕ್ಕೆ ಗಂಧಮಾದನ. ತ್ರಿಕಾಂಡಶೇಷದಲ್ಲಿ ಬರುವ ವಿವರ ಇದು. ಸೃಷ್ಟಿಯ ನಂತರ ಬಹು ದೂರ ಸಾಗಿದಮೇಲೆ ದ್ವೀಪಗಳೂ ವರ್ಷಗಳೂ ಖಂಡಗಳೂ ಪರ್ವತಗಳೂ ತೋರಿಕೊಂಡುವು; ಇವೆಲ್ಲ ತೋರಿಕೊಂಡಮೇಲೆ ರಾಜರು ಒಡೆತನ ಮಾಡತೊಡಗಿ ತಮ್ಮತಮ್ಮಲ್ಲಿ ಪ್ರದೇಶಗಳನ್ನು ವಿಂಗಡಿಸಿಕೊಂಡರು. ಎಂದಮೇಲೆ ಇಳಾವೃತದ ಪ್ರಸ್ತಾಪ ಐತಿಹಾಸಿಕ ಯುಗಕ್ಕೆ ಸೇರಿದುದು.

ಹೀಗಿರುವಲ್ಲಿ ಮನು ವೈವಸ್ವತನಿಗೂ ಇತಿಹಾಸಕ್ಕೂ ಸ್ವಲ್ಪವಾದರೂ ನಂಟಿರುವ ಸಾಧ್ಯತೆಯಿದೆ. ಆದರೆ ವೈವಸ್ವತನ ಹೆಸರಿನಲ್ಲಿ ಯಾವ ಸ್ಮೃತಿಯಾಗಲಿ ಶಾಸ್ತ್ರವಾಗಲಿ ಉಳಿದುಬಂದಿಲ್ಲ; ಯಾವ ಕಾಲದಲ್ಲಿಯಾದರೂ ಇದ್ದಿತೆಂಬ ಕುರುಹುಗಳೂ ಇಲ್ಲ. ಸ್ವಾಯಂಭುವನ ಶತಸಾಹಸ್ರಗ್ರಂಥವೊಂದು ಶಾಸ್ತ್ರವಾಗಿ ಇದ್ದಿತೆಂಬ ವೈದಿಕಯುಗಾನಂತರದ ಪ್ರತೀತಿಯಾದರೂ ಇದೆ; ವೈವಸ್ವತನಿಗೆ ಈ ಪ್ರತೀತಿಯ ಪುಣ್ಯವೂ ಇಲ್ಲ. ಬೌಧಾಯನರು ಹೇಳುವ ಏಳುಮಂದಿ ಸ್ಮೃತಿಕಾರರಲ್ಲಿ, 'ವಸಿಷ್ಠಸ್ಮೃತಿ'ಯು ಹೇಳುವ ಐವರಲ್ಲಿ, ಅಪಸ್ತಂಬರು ಹೇಳುವ ಹತ್ತುಮಂದಿಯಲ್ಲಿ, ಪರಾಶರಸ್ಮೃತಿ ಪಟ್ಟಿಮಾಡಿರುವ ಹತ್ತೊಂಬತ್ತು ಜನರಲ್ಲಿ, 'ಸ್ಮೃತಿಚಂದ್ರಿಕೆ'ಯು ಉದ್ಧರಿಸುವ ಮೂವತ್ತಾರು ಮಂದಿಯಲ್ಲಿ (ಪೈಠೀನಸಿಯ ವಚನದಂತೆ), 'ಪ್ರಯೋಗ ಪಾರಿಜಾತ'ವು ಕೊಟ್ಟಿರುವ ಹದಿನೆಂಟು ಮಂದಿ ಮುಖ್ಯ ಸ್ಮೃತಿಕಾರರಲ್ಲಿ ವೈವಸ್ವತನು ಸೇರಿಲ್ಲ; ಸ್ವಾಯಂಭುವನ ಹೆಸರೂ ಈ ಪಟ್ಟಿಗಳಲ್ಲಿ ಸೇರಿಲ್ಲವೆನ್ನಿ. ಕುಮಾರಿಲರು ತಮ್ಮ 'ತಂತ್ರವಾರ್ತಿಕ'ದಲ್ಲಿ ಹದಿನೆಂಟು ಧರ್ಮಸಂಹಿತೆಗಳನ್ನು ಹೆಸರಿಸಿದ್ದಾರೆ; ಇಲ್ಲಿಯೂ ವೈವಸ್ವತನ ಸೊಲ್ಲಿಲ್ಲ. 'ಮನುಸ್ಮೃತಿ'ಯೇ ಹೇಳುವ ಆರುಮಂದಿ ಸ್ಮೃತಿಕಾರರಲ್ಲಿ (ತನ್ನನ್ನು ಬಿಟ್ಟು) ವೈವಸ್ವತನ ಉಲ್ಲೇಖವಿಲ್ಲ.

ಆದರೆ ಈ ಪಟ್ಟಿಗಳಲ್ಲೆಲ್ಲ ಮನು ಸೇರುತ್ತಾನೆ; ಯಮನೆಂಬುವನೂ ಸೇರುತ್ತಾನೆ. 'ಯಮಸ್ಮೃತಿ'ಯೆಂದು ಪ್ರತ್ಯೇಕವಾಗಿ ಯಾವ ಗ್ರಂಥವೂ ಉಪಲಬ್ಧವಿಲ್ಲ

ವಾದರೂ, 'ಯಮಸ್ಮೃತಿ'ಯಿಂದ ಎನ್ನುವ ಶ್ಲೋಕಗಳು 'ವಸಿಷ್ಠಧರ್ಮಸೂತ್ರ', 'ಅಪರಾರ್ಕ', 'ಮಿತಾಕ್ಷರಾ', 'ಸ್ಮೃತಿಚಂದ್ರಿಕೆ' ಮೊದಲಾದ ಕೆಲವು ಕಡೆ ಉದ್ಧೃತ ವಾಗಿವೆ. ಆದರೆ ಬಹುಮಟ್ಟಿಗೆ ಇವೆಲ್ಲ 'ಮನುಸ್ಮೃತಿ'ಯಲ್ಲಿಯೇ ಕಾಣಸಿಗುವಂಥ ಶ್ಲೋಕಗಳು. ಯಮನು ಮಾನವರಿಗೆ ಹಿತಕಾರಿಯೆಂದು ಋಗ್ವೇದ ಹೇಳುತ್ತದೆ. (10, 12, 6 'ಯಮಸ್ಯಯೋ ಮನವತೇ'; ಹೀಗೆ ಯಮನು ಮನುವೇ. ಯಮನಿಗೆ ವೈವಸ್ವತನೆಂದೂ ಹೆಸರಿದೆಯಷ್ಟೆ. ಮನು, ಯಮ, ವೈವಸ್ವತ ಮೂವರೂ ಒಂದೇ ಆಕರವನ್ನು ಸೂಚಿಸುವ ಧ್ವನಿಯಿದೆ. ಜೀವಾನಂದ ವಿದ್ಯಾ ಸಾಗರರು ಸಿದ್ಧಪಡಿಸಿರುವ 'ಸ್ಮೃತಿಸಂಗ್ರಹ'ದಲ್ಲಿ ಯಮಸ್ಮೃತಿಯ ಶ್ಲೋಕಗಳಿವೆ; ಒಂದು ಶ್ಲೋಕದಲ್ಲಿ 'ಭಾಸ್ವತಿ'ಯ ಮತವೆಂದು ಹೇಳುವ ಮಾತಿದೆ ('ಭಾಸ್ವತಿರಬ್ರ-ವೀತ್', 33ನೆಯ ಶ್ಲೋಕ). ಈ ಭಾಸ್ವತಿಯೂ ಸ್ಮೃತಿಕಾರರ ಪಟ್ಟಿಗಳಲ್ಲಿ ಸೇರಿಲ್ಲ. ಭಾಸ್ವತಿಯೂ ಸೂರ್ಯನ ಮಗನೆಂಬ ಒಕ್ಕಣೆಯಿದೆ: ಭಾಸ್ವತಿಯೋ ವೈವಸ್ವತನೋ? ಯಮನಿಗೇ ಭಾಸ್ವತಿಯೆಂದು ಮತ್ತೊಂದು ಹೆಸರೋ?

ಮೇಲೆ ಕಾಣಿಸಿದ 'ಬೃಹನ್‌ಮನು' ಅಥವಾ 'ವೃದ್ಧಮನು' ಎಂಬುದೇ ಮೊದಲಿನ ಮಾನವಧರ್ಮಶಾಸ್ತ್ರವಾಗಿದ್ದು ಇದರಲ್ಲಿ ವೈವಸ್ವತ ಮನುವಿನ ಪಾತ್ರ ವಿದ್ದಿರಬಹುದು. ಏಕೆಂದರೆ ವೈವಸ್ವತ ಮನುವು 'ಧರ್ಮರಹಸ್ಯ ನಿರ್ಣೇತಾರ' ನೆಂದು ನಾಭಾನೇದಿಷ್ಠಸೂತ್ರದಲ್ಲೇ ಸೂಚನೆಯಿರುವುದನ್ನು ಮೊದಲೇ ತಿಳಿಸಿದ್ದೇನಷ್ಟೆ; ಸಂಹಿತಾ, ಬ್ರಾಹ್ಮಣಗ್ರಂಥಗಳಲ್ಲೂ ಇದು ಉಳಿದಿದೆ. ವೇದಕಾಲವಾದಮೇಲೆ ಈ ಉಲ್ಲೇಖ ಬರುವುದಿಲ್ಲ; ಮನುವಿನ ಹೆಸರೇ ಮುಂದೆ ಬರುತ್ತದೆ.

ಸ್ಮೃತಿಯೆಂದರೇನೆಂದು ಸ್ವಲ್ಪ ವಿಚಾರಿಸಿದರೆ ಈ ಸಮಸ್ಯೆ ಬಗೆಹರಿಯಲು ದಾರಿ ಕಂಡೀತೇನೋ. ಮನುಸ್ಮೃತಿಯು (2, 10) 'ಶ್ರುತಿಸ್ತು ವೇದೋ ವಿಜ್ಞೇಯೋ ಧರ್ಮಶಾಸ್ತ್ರಂ ತು ವೈ ಸ್ಮೃತಿಃ' ಎಂದು ಹೇಳಿ ಸ್ಮೃತಿಯೆಂದರೆ ಧರ್ಮಶಾಸ್ತ್ರವೆಂದು ನಿರೂಪಿಸಿದೆ; ಆ ಶ್ರುತಿಗೆ ಬೇರೆಯಾಗಿಯೂ ಕಾಣಿಸಿದೆ. ಮನುಸ್ಮೃತಿಯಲ್ಲಿ ಸ್ಮೃತಿಯ ಸ್ವರೂಪವನ್ನು ವಿವರಿಸುವಾಗ ವೇದಕ್ಕೆ ಹೊರತಾದ, ಮತ್ತು ವೇದಕ್ಕೆ ಎದುರಾಗಿ ನಿಂತ ಕೃತಿಗಳೂ ಸ್ಮೃತಿಯ ಚೌಕಟ್ಟಿನಲ್ಲಿ ಸೇರಿಕೊಳ್ಳು ತ್ತವೆ (12, 95). ಇದನ್ನು ಕುಮಾರಿಲಭಟ್ಟರು ತಮ್ಮ 'ತಂತ್ರವಾರ್ತಿಕ'ದಲ್ಲಿ ಎತ್ತಿಕೊಂಡು, ಪಾಖಂಡಿಗಳೂ, ವಿಕರ್ಮಸ್ಥರೂ, ಹೈತುಕರೂ (ಎಂದರೆ ತಾರ್ಕಿಕರು) 'ವೇದಬಾಹ್ಯ'ವಾದ ಸ್ಮೃತಿಯಲ್ಲಿ ಅಡಕವಾಗುವರೆಂದು ಸೂಚಿಸಿದ್ದಾರೆ. ಎಂದರೆ

ಸ್ಮೃತಿಯು ವೇದಕ್ಕಿಂತ ವಿಶಾಲವಾದ, ವ್ಯಾಪಕವಾದ ನೆಲೆಯೆಂದಾಯಿತು. ಬದುಕಿನ ಆಚಾರವ್ಯವಹಾರಗಳು ವೈದಿಕ ವಿಧಿನಿಷೇಧಗಳಷ್ಟರಲ್ಲಿ ಮುಗಿಯಲಾರವೆಂಬ ಅರಿವು ಇಲ್ಲಿ ತೋರಿಕೊಳ್ಳುತ್ತದೆ. ಧರ್ಮಶಾಸ್ತ್ರದಲ್ಲಿ ವೈದಿಕವಾದ ಸಂದರ್ಭವಿದ್ದರೂ ಅದೇ ಮುಖ್ಯವಲ್ಲ; ಸರ್ವಸ್ವವಲ್ಲ. ಹಾಗೆಂದೇ ಸ್ಮೃತಿಗೆ ಆಕರ 'ಮಾನವಧರ್ಮ ಶಾಸ್ತ್ರ'.

ಮಹಾಭಾರತದಲ್ಲಿ ರಾಜಧರ್ಮಾನುಶಾಸನವನ್ನು ಪ್ರಸ್ತಾಪಿಸುತ್ತ (ಶಾಂತಿ ಪರ್ವದಲ್ಲಿ 89–90 ಅಧ್ಯಾಯಗಳು) ಸ್ಮೃತಿಗೆ ಇದೇ ವಿಸ್ತಾರವಾದ ನೆಲೆಯನ್ನು ಹೇಳಿದೆ. ಎಲ್ಲ ಪ್ರಾಣಿಗಳೂ ಧರ್ಮದಲ್ಲಿ ನಿಂತಿವೆ, ಧರ್ಮವು ರಾಜನಲ್ಲಿ ನಿಂತಿದೆ. ಧರ್ಮವು ಯಾವನಲ್ಲಿ ಬೆಳಗುವುದೋ ಅವನೇ ರಾಜ. ಧರ್ಮವು ಬೆಳೆದರೆ ಎಲ್ಲ ಪ್ರಾಣಿಗಳೂ ಬೆಳೆಯುತ್ತವೆ; ಧರ್ಮವು ಕುಗ್ಗಿದರೆ ಎಲ್ಲ ಪ್ರಾಣಿಗಳೂ ಕುಗ್ಗುತ್ತವೆ (90, 5 ಮತ್ತು 15–17). ಆದ್ದರಿಂದ ಧರ್ಮವು 'ಪ್ರಜಾನುಗ್ರಹಕಾರಣ'; ರಾಜನು ವಿಶೇಷವಾಗಿ ಪ್ರಜೆಗಳ ಹಿತಕ್ಕಾಗಿಯೇ ದುಡಿಯಬೇಕು ('ತಸ್ಮಾದ್ ರಾಜ್ಞಾ ವಿಶೇಷೇಣ ವರ್ತಿತವ್ಯಂ ಪ್ರಜಾಹಿತೇ', 35). ಧರ್ಮವೆಂದರೆ ಒಂದೇ ದಾರಿ, ಅದು 'ಸರ್ವಲೋಕಸುಖಾವಹ' ಎಂದರೆ ಎಲ್ಲ ಜನರಿಗೂ ಸುಖವನ್ನುಂಟುಮಾಡು ವುದು (84, 4 'ಇಂದ್ರ-ಬೃಹಸ್ಪತಿ ಸಂವಾದ'). ಈ ಒಕ್ಕಣೆಯಲ್ಲಿ ಧರ್ಮವು ವೇದಕ್ಕೆ ವಿಹಿತವಾಗಿರಬೇಕೆಂಬ ಆಗ್ರಹ ಕಾಣುವುದಿಲ್ಲ. ರಾಜನು ವೈದಿಕರ ಹಿತ ಕ್ಕಾಗಿ ಮಾತ್ರವೆಂದಲ್ಲ, ಅವನ ಧರ್ಮ 'ಸರ್ವಲೋಕಸುಖಾವಹ'.

ಆದರೆ ಬರಬರುತ್ತ ಸ್ಮೃತಿಯ ವ್ಯಾಪ್ತಿ ಮೊಟಕಾಗುತ್ತ ಬಂದುದನ್ನು ಕಾಣು ತ್ತೇವೆ. ಮಹಾಭಾರತದಲ್ಲೇ ಕೆಲವೆಡೆ ಧರ್ಮವು ವೇದಕ್ಕೆ ವಿರುದ್ಧವಾಗಿರಬಾರದು, ವರ್ಣಾಶ್ರಮಧರ್ಮಗಳನ್ನು ಎತ್ತಿಹಿಡಿಯಬೇಕು ಎಂದು ಮೊದಲಾದ ನಿರೂಪಣೆ ಬಂದಿದೆ. ಮಹಾಭಾರತದ ರಚನೆಯಲ್ಲಿ ಮೊದಲ ಹಂತದ ವಿಶಾಲವ್ಯಾಪ್ತಿಯ 'ಮಾನವ ಧರ್ಮ' ಮುಂದಿನ ಹಂತಗಳಲ್ಲಿ 'ವೈದಿಕ' ಮೂಸೆಯೊಳಗೆ ಇಳಿದು ಅಲ್ಲೇ ಉಳಿದುಕೊಂಡಿತು. 'ಮಾನವ ಧರ್ಮಶಾಸ್ತ್ರ' ಈಗ ಉಪಲಬ್ಧವಾಗಿರುವ 'ಮನುಸ್ಮೃತಿ'ಯಾದುದು ಹೇಗೆಂಬ ಸೂಚನೆ ಇಲ್ಲಿ ಕಾಣುತ್ತದೆ. ವೇದದಲ್ಲಿ ಧರ್ಮಕ್ಕೆ ವಿಶಾಲವಾದ ಅರ್ಥವೇ ಇದೆ; ಸರ್ವಪ್ರಾಣಿಸಾಧಾರಣವಾದ, ಸಕಲ ಜನರಿಗೆ ಆಧಾರವಾದ ಜೀವನನಿಯಮವನ್ನೇ ಹೇಳಿದ್ದಾರೆ. ಡಾ॥ ಶಂ. ಬಾ. ಜೋಶಿಯವರು ಇದನ್ನೇ 'ಪ್ರಜ್ಞಾನೇತ್ರ'ವೆಂದು ಕರೆದಿದ್ದಾರೆ ಎಂದು ತೋರುತ್ತದೆ.

ಮುಂದೆ ವೇದದ ಆಚಾರ ವ್ಯವಹಾರ ಸಾರ್ವಕಾಲಿಕವಾದುದು, ಸಾರ್ವಜನೀನವಾದುದು, ಸರ್ವಸಮ್ಮತವಾಗಬೇಕು ಎಂಬ ಹಟದಿಂದ ಸಂಹಿತೆಗಳೂ ಬ್ರಾಹ್ಮಣಗಳೂ ಧರ್ಮದ ವ್ಯಾಪ್ತಿಯನ್ನು ಸಂಕೋಚಮಾಡಿದವು. ಈ ಸಂಕುಚಿತ ದೃಷ್ಟಿಯೇ ನಡುಯುಗದಲ್ಲಿ ಕಾಣಿಸಿಕೊಂಡ ಎಲ್ಲ ಸ್ಮೃತಿಗ್ರಂಥಗಳಿಗೂ ಪ್ರೇರಣೆಯಾಯಿತು. ಧರ್ಮವೆಂದರೆ 'ವೇದಾವಿರುದ್ಧ'ವಾದುದು ಎಂಬ ಕಲ್ಪನೆ ಮಾಡಿಕೊಂಡುದು ಈ ಸಂದರ್ಭದಲ್ಲಿಯೇ.

ಕೃಷ್ಣನು ಭಗವದ್ಗೀತೆಯಲ್ಲಿ ತಾನು ಕರ್ಮಯೋಗವನ್ನು ಸರ್ಗಾದಿಯಲ್ಲಿ ವಿವಸ್ವತನಿಗೆ ಹೇಳಿದುದಾಗಿಯೂ, ವಿವಸ್ವತನು ವೈವಸ್ವತಮನುವಿಗೆ ಹೇಳಿದುದಾಗಿಯೂ, ಅದು ರಾಜರ್ಷಿಗಳ ಪರಂಪರೆಯಲ್ಲಿ ಬಂದು ಕಾಲಕ್ರಮದಲ್ಲಿ ನಶಿಸಿ ಹೋಯಿತು ('ಮಹತಾ ಕಾಲೇನ ನಷ್ಟಃ') ಎಂದೂ ಹೇಳಿರುವುದನ್ನು ಈ ಚೌಕಟ್ಟಿನಲ್ಲೇ ಪರಿಶೀಲಿಸಬೇಕು. 'ಮಾನವಧರ್ಮ', ಡಾ॥ ಜೋಶಿಯವರ ಮಾತಿನಲ್ಲಿ, 'ನರಧರ್ಮ'ವಾದುದರ ಸೂಚನೆ ಇಲ್ಲಿದೆ. ಆದರೆ ಜೋಶಿಯವರ ವಾದಕ್ಕೆ ವಿರುದ್ಧವಾಗಿ, ಕೃಷ್ಣ ಭಗವದ್ಗೀತೆಯಲ್ಲಿ ಮಾಡಿದ್ದು ಮತ್ತೆ 'ಮಾನವ ಧರ್ಮ'ವನ್ನು ಎತ್ತಿಹಿಡಿದದ್ದೇ. ನಡುಯುಗದ ಸ್ಮೃತಿಗ್ರಂಥಗಳಲ್ಲಿ ಕಾಣುವ ಸಂಕುಚಿತ ದೃಷ್ಟಿ ಭಗವದ್ಗೀತೆಯಲ್ಲಿಲ್ಲ; ಅದು ದಿಟವಾಗಿ 'ಸರ್ವಲೋಕಸುಖಾವಹ'ವಾದ ಕಲ್ಪನೆಯನ್ನೇ ಮುಂದಿರಿಸಿಕೊಂಡಿದೆ. ರಾಜನ ಧರ್ಮ 'ಕ್ಷತ್ರ', 'ಕ್ಷತ್ರ'ದ ಬಲದಿಂದಲೇ 'ಬ್ರಹ್ಮ' ಉಳಿಯಬೇಕು. ಕ್ಷತ್ರವೆನ್ನುವುದು ಮಾನವಧರ್ಮಕ್ಕೆ ಹೊಂದಿಕೊಳ್ಳಬೇಕು. 'ಬ್ರಹ್ಮ' ವಿಶಿಷ್ಟ ವ್ಯಕ್ತಿಗಳಿಗೆ. ಆದುದರಿಂದಲೇ ಕ್ಷತ್ರಿಯ ಪರಂಪರೆಯಲ್ಲಿ ಬಂದ ಯೋಗವೇ (ಕರ್ಮಯೋಗವೇ) ಭಗವದ್ಗೀತೆಯ ವಸ್ತುವಾಗಿರುವುದು.

ಋಗ್ವೇದದಲ್ಲಿ ಬರುವ ಮನುವೈವಸ್ವತ ಸೂಕ್ತ (8, 27) ವಿಶಾಲವ್ಯಾಪ್ತಿಯ ಮಾನವ ಧರ್ಮದ ಮೂಲತತ್ತ್ವಗಳನ್ನೇ ಪ್ರತಿಪಾದಿಸುತ್ತದೆಯೆಂಬುದನ್ನು ಗಮನಿಸಬಹುದು. ಇಲ್ಲಿ 'ಮನುವಿಗೆ ಸಂಪತ್ತು' (21, 'ವಾಮಂ ದತ್ಥ ಮನವೇ'), 'ಮನುವಿಗೆ ಧನ' (14, 'ಮನವೇ.....ಸರಾತಯಃ') 'ಹಿಂದೆ ಮನುವು ಪ್ರಾರ್ಥಿಸಿದಂತೆ' (7, 'ಮನುಷ್ವತ್'), 'ಮನುವಿನ ಏಳ್ಗೆ' (4, 'ಮನವೇ ವೃಧೇ') ಎಂದು ಮೊದಲಾದ ಉಲ್ಲೇಖಗಳಲ್ಲಿ ಮನುವೆಂದರೆ ಇಡೀ ಮನುಷ್ಯವರ್ಗ. ಮನುಷ್ಯನಿಗೆ, ಅವನ ಸಂತತಿಗೆ ಇಂದೂ ಮುಂದಿನ ದಿನಗಳಲ್ಲೂ, ಅಧಿಕವಾದ ಸಂಪತ್ತು ಒದಗ

ಬೇಕು (14, 'ತೇ ನೋ ಅದ್ಯತೇ ಆಪರಂ ತುಚೇ ತು ನೋ ಭವಂತು ವರಿವೋ ವಿದಃ'); ಯಾವ ಮನುಷ್ಯನನ್ನೂ ಉಪದ್ರವ ಕಾಡಬಾರದು (15, 'ನ ತಂ ಧೂರ್ತಿಃ'); ಮನುಷ್ಯನಿಗೆ ಮನೆ ನೆಮ್ಮದಿಯಾಗಿರಬೇಕು, ಅನ್ನ ಅಧಿಕವಾಗಿರ ಬೇಕು, ಏಳಿಗೆಯಿರಬೇಕು, ಹಗೆಗಳ ಕಾಟವಿರಬಾರದು (16, 'ಪ್ರ ಸ ಕ್ಷಯಂ ತಿರತೇ ಮಹೀರಿಷೊ...ಪ್ರ-ಜಾಯತೇ, ಅರಿಷ್ಟಃ ಸರ್ವ ಏಧತೇ'); ಹೆಣಗಾಟ-ಹೋರಾಟ ಗಳಿಲ್ಲದೆ ಸಂಪತ್ತು ದೊರಕಬೇಕು (17 'ಋತೇ ಸ ವಿಂದತೇ ಯುಧಃ'); ಅವನ ದಾರಿ ಸುಗಮವಾಗಬೇಕು (17, 'ಸುಗೇಭಿರ್ಯಾತ್ಯಧ್ವನಃ'); ನೇರವಾದ ದಾರಿ ಯಲ್ಲಿ ಚೆನ್ನಾಗಿ ನಡೆಯುವಂತಾಗಬೇಕು (18, 'ಅಜ್ರೇ ಚಿತ್ ಅಸ್ಮೈ ಕೃಣುಥಾ ನ್ಯಂಚನಂ') ಮತ್ತು ದಾರಿ ಕಠಿಣವಾದರೆ ಎಡವದೆ ಸಲೀಸಾಗಿ ಹೋಗುವಂತಾಗ ಬೇಕು ('ದುರ್ಗೇ ಚಿತ್ ಸರಸರಣಂ ಆ'); ಅವನ ಮನೆ ದೋಷವಿಲ್ಲದೆ ಇರಬೇಕು (9, 'ಅಚ್ಛಿದ್ರಂ ಶರ್ಮ') ಮತ್ತು ಯಾರೂ ದೂರದಿಂದಾಗಲಿ ಹತ್ತಿರದಿಂದಾಗಲಿ ಅವನನ್ನು ಕಾಡದಂಥ ನೆಮ್ಮದಿಯ ಮನೆಯಿರಬೇಕು ('ನ ಯಾದ್ದೂರಾದ್ವಸವೋ ನೋ ಚಿದಂತಿತೋ ವರೂಥಮಾ ದಧರ್ಷತಿ').

ಮನುಷ್ಯನು ದೇವತೆಗಳಿಂದ ಬಯಸುವುದು ಸಂಪತ್ತು (2, 'ವಸು'), ಹಗಲೂ ರಾತ್ರಿಯೂ ರಕ್ಷಣೆ (2, 'ಉಷಾಸಾನಕ್ತಂ ಪ್ರಾವಿತಾರಃ'), ಹಿಂಸೆಯಿಲ್ಲದ ಮನೆ (4, 'ಯಂತಾನೋಽವೃಕಂ ಛರ್ದಿಃ'), ಹಿಂದಿನಿಂದ ಬಂದ ಅಭ್ಯುದಯ ಮತ್ತು ಹೊಸದಾಗಿ ಬರುವ ಸುಖ (10, 'ಪೂರ್ವಸ್ಮೈ ಸುವಿತಾಯ ವೋಚತ ಮಕ್ಷೂ ಸುಮ್ನಾಯ ನವ್ಯಸೇ'). ತಮ್ಮ ತಮ್ಮ ಬಯಕೆಗಳನ್ನು ತೀರಿಸಿಕೊಳ್ಳುವುದರಲ್ಲಿ ಎಲ್ಲ ಮನುಷ್ಯರೂ ಸಮಾನರೇ. ಮನುಷ್ಯರು ಮಾತ್ರವೇನು, ಪಶುಗಳೂ, ಪಕ್ಷಿ ಗಳೂ, ಅವರಂತೆಯೇ ಇರುವವು (11, 'ನಿ ದ್ವಿಪಾದಶ್ಚತುಷ್ಪಾದೋ ಅರ್ಥಿನೋಽ ವಿಶ್ರನ್ ಪತಿಷ್ಣವಃ'). ಇದಕ್ಕಿಂತ ವಿಶಾಲವಾದ ಮಾನವಧರ್ಮದ ನೆಲೆ ಬೇರೊಂದುಂಟೇ ?

ಪರಿಶಿಷ್ಟ

ಭಗವದ್ಗೀತೆಯಲ್ಲಿ ಮನುಗಳ ಪ್ರಸ್ತಾಪ—ಒಂದು ಟಿಪ್ಪಣಿ

ಬಿ.ಎಂ.ಶ್ರೀ. ಪ್ರತಿಷ್ಠಾನದ ಆಶ್ರಯದಲ್ಲಿ ಈ ವರ್ಷ ಶ್ರೀ ಶಂಬಾ ಜೋಶಿಯವರ ದತ್ತಿ ಉಪನ್ಯಾಸವನ್ನು ನಾನು ನೀಡುವ ಸಂದರ್ಭದಲ್ಲಿ ವೈವಸ್ವತ ಮನುವನ್ನು ಕುರಿತು ಸಾಕಷ್ಟು ಸುದೀರ್ಘವಾಗಿ ಚರ್ಚಿಸಿದೆ. ಅಚ್ಚಾಗಲಿರುವ ಈ ಪ್ರವಚನ ಪ್ರಬಂಧಕ್ಕೆ ಈಗ ಟಿಪ್ಪಣಿಯೊಂದನ್ನು ಸೇರಿಸುತ್ತಿದ್ದೇನೆ. ಉಪನ್ಯಾಸದ ಸಂದರ್ಭದಲ್ಲಿ ಭಗವದ್ಗೀತೆಯ 'ವಿವಸ್ವತೇ ಯೋಗಂ ಪ್ರೋಕ್ತವಾನ್ ; ವಿವಸ್ವಾನ್ ಮನವೇ ಪ್ರಾಹ' (೪, ೧–೨) ಎಂಬ ಉಲ್ಲೇಖವನ್ನು ಎತ್ತಿಕೊಂಡು ವಿವೇಚನೆ ನಡೆಸಿದೆ. ಈಗ, ಭಗವದ್ಗೀತೆಯಲ್ಲೇ ಬರುವ ಮನುಗಳನ್ನು ಕುರಿತ ಇನ್ನೊಂದು ಉಲ್ಲೇಖವನ್ನು (೧೦, ೬) ಪ್ರಸ್ತಾಪಿಸಲಿದ್ದೇನೆ.

ಈ ಉಲ್ಲೇಖದ ಸಂದರ್ಭ ಕೃಷ್ಣನು ತನ್ನ ವಿಭೂತಿಯ, ಯೋಗದ ವಿವರಗಳನ್ನು ಅರ್ಜುನನಿಗೆ ಬಿತ್ತರಿಸುವುದು. 'ಮಹರ್ಷಯಃ ಸಪ್ತ ಪೂರ್ವೇ ಚತ್ವಾರೋ ಮನವಃ' ಇವರೆಲ್ಲರೂ ತನ್ನ ವಿಭೂತಿಗಳೇ ಎಂದೂ, ತನ್ನ ಮಾನಸಪುತ್ರರೇ ಎಂದೂ, ಅವರಿಂದಲೇ ಈ ಲೋಕವೂ ಆದರೊಳಗಿನ ಪ್ರಜಾಸಂತತಿಯೂ ಹೊರಬಂದುವೆಂದೂ ಕೃಷ್ಣನ ಮಾತು. ಇಲ್ಲಿನ ಒಕ್ಕಣೆಯಲ್ಲಿ ಮಹರ್ಷಿಗಳಿಗಾಗಲೀ ಮನುಗಳಿಗಾಗಲೀ ಹೆಚ್ಚಿನ ಒತ್ತು ಏನೂ ಇರದು. ಆದರೆ ಅವರನ್ನು ನಿರ್ದೇಶಿಸುತ್ತ ವ್ಯಾಖ್ಯಾನಕಾರರು ಸೂಚಿಸಿರುವ ಬೇರೆ ಬೇರೆ ವಿವರಣೆಗಳಲ್ಲಿ ಸ್ವಾರಸ್ಯವಿದೆ.

ಸೃಷ್ಟಿಯ ಮೊದಲಲ್ಲಿ ಆಗಿಹೋದವರ ಪ್ರಸ್ತಾಪ ಇದು. ನೇರವಾಗಿ ಬ್ರಹ್ಮ ಅಥವಾ ಹಿರಣ್ಯಗರ್ಭನಿಂದಲೇ ಕಾಣಿಸಿಕೊಂಡವರು ಅವರು : 'ಮಾನಸಪುತ್ರ'ರು. ಉಳಿದ ಪ್ರಜೆಗಳಂತೆ 'ಯೋನಿಜ'ರಲ್ಲ. ಇವರಲ್ಲಿ 'ಮಹರ್ಷಯಃ ಸಪ್ತಃ' ಎಂಬುದು ಸ್ಪಷ್ಟವಾಗಿದೆ : ವ್ಯಾಖ್ಯಾನಕಾರರ ವಿವರಣೆಗಳಲ್ಲಿ ಅಷ್ಟಾಗಿ ಗೊಂದಲವಿರದು. ಶಂಕರಾಚಾರ್ಯರೂ ರಾಮಾನುಜಾಚಾರ್ಯರೂ ಭೃಗುವೇ ಮೊದಲಾದ ಏಳು ಮಂದಿ ಮಹರ್ಷಿಗಳೆಂದಿರುವುದನ್ನು ಸಾಮಾನ್ಯವಾಗಿ ಇತರರೂ ಒಪ್ಪಿಕೊಳ್ಳುತ್ತಾರೆ. ಮಧ್ವಾಚಾರ್ಯರು ಪಟ್ಟಿಗೆ ಮರೀಚಿ, ಅತ್ರಿ, ಅಂಗಿರಸ ಮೊದಲಾಗಿ ಏಳು ಮಂದಿ ಮಹರ್ಷಿಗಳನ್ನು ಸೂಚಿಸುತ್ತ, ಮಹಾಭಾರತದ ಪ್ರಮಾಣವನ್ನು (೧೨, ೩೩೫, ೨೮) ಉಲ್ಲೇಖಿಸಿದ್ದಾರೆ. ಈ ಅಭಿಪ್ರಾಯಭೇದ ಈಗ ನಮಗೆ ಪ್ರಸ್ತುತವಲ್ಲ. ಮಹರ್ಷಿಗಳ ಕೈಬಿಟ್ಟು ಮುಂದೆ ಸಾಗಿದರೆ ಜಾಡು ಕವಲುತ್ತದೆ.

ಮುಂದೆ 'ಪೂರ್ವೇ ಚತ್ವಾರೋ ಮನವಃ' ಎನ್ನುವ ಭಾಗಕ್ಕೆ ವ್ಯಾಖ್ಯಾನಕಾರರು ಮಾಡುವ ಅರ್ಥದಲ್ಲಿ ಒಮ್ಮತವಿಲ್ಲ. ಒಂದು ವಿವರಣೆ, ಮಹರ್ಷಿಗಳು ಏಳು ಮಂದಿ, ಅವರಿಗಿಂತ ಹಿಂದಿನವರು ('ತೇಭ್ಯಃ ಪೂರ್ವೇ') ನಾಲ್ವರು ಮಹರ್ಷಿಗಳು–ಸನಕ, ಸನಂದನ, ಸನಾತನ, ಸನತ್ಕುಮಾರ ಇವರು, 'ಪೂರ್ವೇ ಚತ್ವಾರಃ'. ಕೇಶವಕಾಶ್ಮೀರಿಗಳ 'ತತ್ತ್ವಪ್ರದೀಪಿಕೆ' ಮೊದಲಾದ ಟೀಕೆಗಳು ಹೀಗೆ ಹೇಳುತ್ತವೆ. ಭಾಗವತ ಪುರಾಣದ ಉಲ್ಲೇಖ (೩, ೧೨, ೧೪) ಇಲ್ಲಿ ಪ್ರಮಾಣವಾಗಿ ಬರುತ್ತದೆ. ಇನ್ನೊಂದು ವಿವರಣೆ, ಮಹರ್ಷಿಗಳು ಏಳು ಎಂದಾದಮೇಲೆ, ನಾಲ್ಕು ಇನ್ನೂ ಪ್ರಾಚೀನವಾದುವು ಎಂಬುದು ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಎಂಬ ನಾಲ್ಕು ವ್ಯೂಹಗಳನ್ನು ಸೂಚಿಸುವುದೆಂದು. ಭಾಗವತಪಂಥದ ಆದಿಗ್ರಂಥ ಭಗವದ್ಗೀತೆ ಎನ್ನುವವರು, ಭಾಗವತಧರ್ಮದ ಈ ಕಲ್ಪನೆ ಇಲ್ಲಿ ಪ್ರಸಕ್ತವಾದುದೆಂದು ಒಪ್ಪಿಕೊಳ್ಳುತ್ತಾರೆ. ಬಾಲಗಂಗಾಧರ ತಿಲಕರ 'ಗೀತಾರಹಸ್ಯ'ದಲ್ಲೂ ಇದೇ ತಾತ್ಪರ್ಯವನ್ನು ಹಿಡಿಯಲಾಗಿದೆ.

ಇವೆರಡೂ ವಿವರಣೆಗಳ ಪ್ರಕಾರ 'ಮನವಃ' ("ಮನುಗಳು") ಎಂಬ ಮಾತು ಬಿಡಿಯಾಗಿ ನಿಲ್ಲುತ್ತದೆ. ಮನುಗಳೆಂದರೆ ವಾಡಿಕೆಯಲ್ಲಿರುವ ಹದಿನಾಲ್ಕು ಮಂದಿ ಮನುಗಳು ಎಂದು ಗ್ರಹಿಸಬೇಕೆಂದು ಈ ವ್ಯಾಖ್ಯಾನಕಾರರ ಅಭಿಪ್ರಾಯ. ಆದರೆ 'ಪೂರ್ವೇ ಚತ್ವಾರಃ ಮನವಃ' ಎಂದು ಒಟ್ಟಾಗಿ ಅರ್ಥ ಹೇಳುವವರೂ ಇದ್ದಾರೆ. ಶಂಕರಾಚಾರ್ಯರು, ರಾಮಾನುಜಾಚಾರ್ಯರು, ಮಧ್ವಾಚಾರ್ಯರು ಮತ್ತು ಅವರ ಭಾಷ್ಯಗಳನ್ನು ಅನುಸರಿಸಿರುವ ಎಲ್ಲ ವ್ಯಾಖ್ಯಾನಕಾರರೂ 'ನಾಲ್ವರು ಮನುಗಳು' ಎಂಬ ಅನ್ವಯವನ್ನೇ ಹಿಡಿದಿದ್ದಾರೆ. ಈ ನಾಲ್ವರು ಮನುಗಳು ಯಾರು ? ಹದಿನಾಲ್ಕು ಮನುಗಳು ಎಂದಿರುವಾಗ ನಾಲ್ವರನ್ನು ಮಾತ್ರ ಹೇಳಿರುವ ಕಾರಣವೇನು ?

ಶಂಕರಾಚಾರ್ಯರ ಪ್ರಕಾರ, ನಾಲ್ವರು ಮನುಗಳೆಂದರೆ 'ಸಾವರ್ಣಾ ಇತಿ ಪ್ರಸಿದ್ಧಾಃ'. ಅವರ ಭಾಷ್ಯಕ್ಕೆ ಟೀಕೆಯನ್ನು ಸಿದ್ಧಪಡಿಸಿದ ಆನಂದಗಿರಿ, 'ಪ್ರಸಿದ್ಧಾಃ' ಎಂದರೆ "ಪುರಾಣೇಷು" ಎಂದು ವಿವರಿಸಿದ್ದಾರೆ ; ಆದರೆ ಸಾವರ್ಣರು ಯಾರು ಎಂದು ನಿರ್ದೇಶಿಸುವುದಿಲ್ಲ. ರಾಮಾನುಜಾಚಾರ್ಯರೂ 'ಸಾವರ್ಣಿಕಾಃ' ಎಂದೇ ಹೇಳುತ್ತಾರೆ ; ಅವರ ಭಾಷ್ಯಕ್ಕೆ ಟೀಕೆಯನ್ನು ಬರೆದ ವೇದಾಂತದೇಶಿಕರು ಬ್ರಹ್ಮಸಾವರ್ಣಿ, ರುದ್ರಸಾವರ್ಣಿ, ಧರ್ಮಸಾವರ್ಣಿ, ದಕ್ಷಸಾವರ್ಣಿ ಇವರೇ ನಾಲ್ವರೆಂದು ಎಣಿಕೆ ಮಾಡಿದ್ದಾರೆ. ಆದರೆ ಸಾವರ್ಣಿಯೆಂಬ ಮನು ಮುಂದೆ ಬರತಕ್ಕವನು ; ಈಗಿನ

ವೈವಸ್ವತ ಮನ್ವಂತರ ಮುಗಿದಮೇಲೆ ಎಂಟನೆಯ ಮನ್ವಂತರವನ್ನು ತೊಡಗಿಸುವವನು. ಗೀತೆಯಲ್ಲಿ 'ಪೂರ್ವೇ ಚತ್ವಾರಃ' ಎಂದರೆ "ಹಿಂದಿನವರು" ಎಂಬ ಸ್ಪಷ್ಟವಾದ ಮಾತಿದೆಯಲ್ಲ ? ಮತ್ತೆ, ಈಗಿನ ಲೋಕಕ್ಕೂ ಪ್ರಜೆಗಳಿಗೂ ಮೂಲಪುರುಷರಾದವರು ಮುಂದೆ ಬರತಕ್ಕವರಾದರೆ ಹೇಗೆ ? ಈ ತೊಡಕಿಗೆ ಸಮಾಧಾನ, ಅವರು ಭಾವಿಮನುಗಳಾದರೂ ಚಾಕ್ಷುಷ ಮನ್ವಂತರದಲ್ಲೇ (ಎಂದರೆ ಈಗಿನ ಮನ್ವಂತರಕ್ಕೆ ಹಿಂದಿನದು) ಕಾಣಿಸಿಕೊಂಡವರು, ಸಹೋತ್ಪನ್ನರು. ಬ್ರಹ್ಮಾಂಡ ಪುರಾಣದಲ್ಲಿ (ಉತ್ತರ ಭಾಗ, ೧, ೨೬ ಮತ್ತು ೩೯-೪೪) "ಮಹಾನುಭಾವಾಸ್ತೇ ಪೂರ್ವಂ ಜಜ್ಞಿರೇ ಚಾಕ್ಷುಷೇಂತರೇ" ; "ಚತುರೋ ವೈ ಮನೂನ್ ಪುತ್ರಾನ್ ಚಾತುರ್ವರ್ಣ್ಯಕರಾನ್ ಶುಭಾನ್" ಎಂಬ ಮಾತುಗಳಿವೆ. ಬ್ರಹ್ಮ-ಕ್ಷತ್ರಿಯ-ವೈಶ್ಯ-ಶೂದ್ರರೆಂಬ ಚಾತುರ್ವರ್ಣ್ಯ ವಿಭಾಗಕ್ಕೆ ಮೂಲಪುರುಷರು ಎಂಬ ಕಾರಣದಿಂದ ಇವರ ಪ್ರಸಿದ್ಧಿಯೆಂದು ಈ ಪುರಾಣದ ಒಕ್ಕಣೆ.

ಮಧ್ವಾಚಾರ್ಯರೂ, ವಲ್ಲಭಾಚಾರ್ಯರೂ, ಇತರರೂ ನಾಲ್ವರು ಮನುಗಳೆಂದರೆ ಮೊದಲಲ್ಲಿ ಆಗಿಹೋದ ಸ್ವಾಯಂಭುವನೇ ಮೊದಲಾದ ನಾಲ್ವರು ಎಂದು ನಿರ್ದೇಶಿಸುತ್ತಾರೆ. ಸ್ವಾಯಂಭುವ, ಸ್ವಾರೋಚಿಷ, ರೈವತ, ಉತ್ತಮ ಇವರು ಮೊದಲು ಬಂದವರಾಗಿ ಪ್ರಧಾನರು ("ವಿಭಾಗಃ, ಪ್ರಾಧಾನ್ಯಂ ಪ್ರಾಥಮಿಕತ್ವಾದೇವ ಭವತಿ") ಎಂದು ಮಧ್ವಾಚಾರ್ಯರು ವಿವರಿಸಿ ಗೌತಮಖಿಲದ ಒಂದು ವಾಕ್ಯವನ್ನು ಪ್ರಮಾಣವಾಗಿ ಎತ್ತಿಹೇಳುತ್ತಾರೆ. ಆದರೆ ಅವರೂ, ಅವರನ್ನನುಸರಿಸಿ ವ್ಯಾಖ್ಯಾನ ಮಾಡಿದ ಜಯತೀರ್ಥರೂ, ಚಾತುರ್ವರ್ಣ್ಯ ವಿಭಾಗಕ್ಕೂ ಮನುಗಳಿಗೂ ಗಂಟು ಹಾಕುತ್ತಾರೆ : ದೇವತೆಗಳಲ್ಲಿಯೂ ಚಾತುರ್ವರ್ಣ್ಯ ವಿಭಾಗವಿರುವುದನ್ನು ಅವರು ವಿವರಿಸುತ್ತಾರೆ.

ದೇವತೆಗಳಲ್ಲಿರುವಂತೆಯೇ ಮನುಷ್ಯರಲ್ಲೂ ವರ್ಣವ್ಯವಸ್ಥೆಯನ್ನು ಮಾಡಿದುದೇ 'ಸವರ್ಣ', "ಸಮಾನ ವರ್ಣ" ; ಇದನ್ನು ಮಾಡಿದವರು ಸಾವರ್ಣಿಗಳು ಅಥವಾ ಸಾವರ್ಣಿಕರು. ಉದ್ವಾಹ ತತ್ತ್ವದಲ್ಲಿ ಸಾವರ್ಣವೆನ್ನುವುದು ಒಂದು ಗೋತ್ರದ ಪ್ರವರ್ತಕನ ಹೆಸರು. ಶಂಕರಾಚಾರ್ಯರು ಹೇಳುವ ಸಾವರ್ಣರು ಯಾರೋ ತಿಳಿಯದು. ಆದರೆ ಪುರಾಣಪ್ರಸಿದ್ಧವಾದ ಸಾವರ್ಣ (ಅಥವಾ ಸಾವರ್ಣಿ) ಸವರ್ಣೆಯ ಮಗ. ಸವರ್ಣೆಯೆಂಬುದು ಸೂರ್ಯನ ಹೆಂಡತಿಯಾದ ಛಾಯೆಯ ಹೆಸರು. ಸೂರ್ಯನಿಗೆ ವಿಶ್ವಕರ್ಮನ ಮಕ್ಕಳಾದ ಛಾಯೆ, ಸಂಜ್ಞೆ ಇಬ್ಬರು

ಹೆಂಡಂದಿರು. ಸಂಜ್ಞೆಯಲ್ಲಿ ಯಮ, ಯಮಿ, ಶ್ರಾದ್ಧದೇವ ಎಂಬ ಮೂವರು ಮಕ್ಕಳು ; ಛಾಯೆಯಲ್ಲಿ ಸಾವರ್ಣಿ, ತಪತಿ ಮತ್ತು ಶನೈಶ್ಚರ ಎಂಬ ಮೂವರು ಮಕ್ಕಳು. ಇವರಲ್ಲದೆ ವಡವಾ ಎಂಬ ಮೂರನೆಯ ಹೆಂಡತಿಯನ್ನೂ ಪುರಾಣಗಳು ಹೆಸರಿಸಿ, ಅವಳಿಂದ ಅಶ್ವಿನೀದೇವತೆಗಳು ಹುಟ್ಟಿದರೆಂದೂ ಹೇಳುತ್ತವೆ. ಅಂತೂ ಸೂರ್ಯನ ಮಗನಾದ ಸಾವರ್ಣಿಯು ಮುಂದೆ (ಎಂಟನೆಯ) ಮನುವಾಗುವನೆಂದೂ, ಅವನ ಮನ್ವಂತರದಲ್ಲಿ ವಿರೋಚನನ ಮಗನಾದ ಬಲಿಯು ಇಂದ್ರನಾಗುವನೆಂದೂ ಮಾರ್ಕಂಡೇಯ ಪುರಾಣ (೮೦, ೧೦) ಮೊದಲಾದ ಪುರಾಣಗಳಲ್ಲಿ ಒಕ್ಕಣೆಯಿದೆ.

ಆದರೆ ದೇವೀಭಾಗವತ ಸಾವರ್ಣಿಯನ್ನು 'ಛಾಯಾಸಂಜ್ಞಾಸುತೋ ಯೋಽಸೌ ದ್ವಿತೀಯಃ ಕಥಿತೋ ಮನುಃ ; ಪೂರ್ವಜಸ್ಯ ಸವರ್ಣೋಽಸೌ ಸಾವರ್ಣಸ್ತೇನ ಕಥ್ಯತೇ' ಎಂದು ವಿವರಿಸಿದೆ. ಎಂದರೆ ಸಾವರ್ಣಿಯು ಛಾಯಾದೇವಿಯಲ್ಲಿ ಸೂರ್ಯನ ಮಗ. ವೈವಸ್ವತ ಮನುವು ಸಂಜ್ಞಾದೇವಿಯಲ್ಲಿ ಅದೇ ಸೂರ್ಯನ ಮಗನೆಂದು ಇತರ ಪುರಾಣಗಳಲ್ಲಿ ಒಕ್ಕಣೆಯಿದೆ (ನಿದರ್ಶನಕ್ಕೆ : ಮಾತ್ಸ್ಯಪುರಾಣ, ೯, ೧೧). ಆದರೆ ಮಾರ್ಕಂಡೇಯ ಪುರಾಣವು ಮೇಲೆ ಹೇಳಿದಂತೆ ಸಾವರ್ಣಿಯನ್ನು 'ಛಾಯಾ ಸಂಜ್ಞಾಸುತಃ' ಎಂದೇ ಬಣ್ಣಿಸಿರುವುದನ್ನು ಗಮನಿಸಬೇಕು (೭೯ನೇ ಅಧ್ಯಾಯ). ವೈವಸ್ವತ ಮನುವೂ ಸಾವರ್ಣಿ ಮನುವೂ ಅಣ್ಣ-ತಮ್ಮಂದಿರೆಂದು 'ಪೂರ್ವಜಸ್ಯ ಮನೋಸ್ತುಲ್ಯಃ' ಎಂಬ ಮಾತಿನಿಂದ ಸ್ಪಷ್ಟವಾಗುತ್ತದೆ. ಆದರೆ ಸಾವರ್ಣಿಯನ್ನು ಛಾಯಾ-ಸಂಜ್ಞೆಯ ಮಗ ಎಂದು ಹೇಳಿರುವುದರಿಂದ ವೈವಸ್ವತ ಮನುವೇ ಅವನೋ ಎಂಬ ಸಂದೇಹ ಒದಗುತ್ತದೆ. ಮುಂದೆ ಬಂದ ದಕ್ಷಸಾವರ್ಣಿ, ಬ್ರಹ್ಮಸಾವರ್ಣಿ, ಧರ್ಮಸಾವರ್ಣಿ, ರುದ್ರಸಾವರ್ಣಿಗಳು ಮುಂದಿನ ಮನ್ವಂತರಗಳ (ಒಂಬತ್ತರಿಂದ ಹನ್ನೆರಡು) ಮನುಗಳು ; ಸಾವರ್ಣಿಗಳೆಂಬ ಹೆಸರನ್ನು ತಳೆದಿದ್ದರೂ (ವಿಷ್ಣುಪುರಾಣ ೩, ೨ ; ಭಾಗವತ ೮, ೧೩ ; ಹರಿವಂಶ ೧, ೭) ಅವರು ಸಾವರ್ಣಿಯ ಮಕ್ಕಳಲ್ಲ ; ಕ್ರಮವಾಗಿ ದಕ್ಷ, ಬ್ರಹ್ಮ, ಧರ್ಮ, ರುದ್ರ ಇವರ ಮಕ್ಕಳು. ಮಾತ್ಸ್ಯಪುರಾಣದಲ್ಲಿ ಮುಂದಿನ ಮನುಗಳನ್ನು ಹೀಗೆ ಸಾವರ್ಣಿಗಳೆಂದು ಕರೆಯದೆ ರೌಚ್ಯ (ರುಚಿಪ್ರಜಾಪತಿಯ ಮಗ), ಭೌತ್ಯ (ಭೂತಿನಾಮಕ ಪ್ರಜಾಪತಿಯ ಮಗ), ಮೇರು (ಬ್ರಹ್ಮನ ಮಗ), ಋತು. ಋತುಧಾಮ ಮತ್ತು ವಿಷ್ವಕ್ಸೇನರೆಂದು ಹೆಸರಿಸಲಾಗಿದೆ. ಅಂತೂ ಏಳರಿಂದ ಮುಂದೆ ಬಂದ ಮನುಗಳಿಗೂ ಮನುಷ್ಯರಿಗೂ ನಂಟು ಕಡಮೆ. ವೈವಸ್ವತ ಮನುವಿನ ಮಕ್ಕಳು ಇಲ, ಇಕ್ಷ್ವಾಕು, ಕುಶನಾಭ, ನರಿಷ್ಯಂತ, ನಾಭಾಗ, ಶರ್ಯಾತಿ ಇವರೆಲ್ಲ ಮನುಷ್ಯರಾಜರೇ ; ಅವರ ವಂಶಗಳು ನಮ್ಮ ದೇಶದಲ್ಲಿ ಇತಿಹಾಸಪ್ರಸಿದ್ಧ

ವಾದುವು. ಸಾವರ್ಣಿಯ ಮಕ್ಕಳ ಹೆಸರನ್ನು ನೋಡಿದರೆ (ಧೃತಿ, ವರೀಯಾನ್, ವೃಷ್ಟಿ, ಚರಿಷ್ಣು, ಈಡ್ಯ, ಸುಮತಿ, ವಸು. ಸುವರ್ಣ) ದಿಟವಾದ ಮನುಷ್ಯರನ್ನು ಸೂಚಿಸುವಂತೆ ತೋರುವುದಿಲ್ಲ; ಪ್ರಜಾಪಾಲನೆಗೆ ಅಗತ್ಯವಾದ ತತ್ತ್ವಗಳನ್ನು ಹೇಳುವ ಮಾತುಗಳು ಅವು. ಇದು ಮುಂದಿನ ಮನುಗಳ ಮಕ್ಕಳಿಗೂ ಅನ್ವಯಿಸುತ್ತದೆ.

ಆದುದರಿಂದ ಮನ್ವಂತರಗಳ ಎಣಿಕೆಯಲ್ಲಿ ಗಟ್ಟಿಯಾಗಿ ನಿಲ್ಲುವುದು ವೈವಸ್ವತ ಮನ್ವಂತರವೇ. ಪ್ರಜೆಗಳ ಉತ್ಪತ್ತಿಯಾದುದು ಅದರ ಹಿಂದಣ ಚಾಕ್ಷುಷ ಮನ್ವಂತರದಲ್ಲಿ; ಪ್ರಜಾಪಾಲನೆ (ಇದೇ ಮನುಗಳ ಕರ್ತವ್ಯ 'ಮನೂನಾಂ ಪಾಲನತ್ವಂ') ಪ್ರಸಕ್ತವಾಗುವುದು ವೈವಸ್ವತ ಮನ್ವಂತರದಲ್ಲೇ. ಹಿಂದಿನ, ಮುಂದಿನ ಮನುಗಳೆಲ್ಲ ಕಲ್ಪನೆಯ ಕೂಸುಗಳೇ. ಮೇಲಾಗಿ, ಭಗವದ್ಗೀತೆಯಲ್ಲಿ ಹದಿನಾಲ್ಕು ಮನುಗಳೆಂಬ ಒಕ್ಕಣೆ ಎಲ್ಲಿಯೂ ಬರುವುದಿಲ್ಲ. ಇದು ಪುರಾಣಗಳಲ್ಲಿ ಸಿದ್ಧವಾದ ಎಣಿಕೆಯಿರಬೇಕು. ಭಗವದ್ಗೀತೆಗೆ ಪರಿಚಿತರಾದವರು (ಅವರು ಯಾರಾದರೂ ಆಗಿರಲಿ) ನಾಲ್ವರೇ ಮನುಗಳು ('ಚತ್ವಾರೋ ಮನವಃ'). ಋಗ್ವೇದದಲ್ಲಿ ಕಾಣಸಿಗುವವರು ಮೂವರೇ ಮನುಗಳು (೬, ೪, ೧೮, ಸಂವರಣ ಮನು ; ೯, ೪, ೨೦, ವೈವಸ್ವತ ಮನು ; ೮, ೨, ೨ 'ಸಾವರ್ಣ ಮನು') ; ಈ ಪಟ್ಟಿಗೆ ನಿರುಕ್ತಕಾರರು (೩, ೪, ೨) ಸೇರಿಸಿರುವ ಸ್ವಾಯಂಭುವ ಮನುವನ್ನೂ ಸೇರಿಸಿಕೊಂಡರೆ ನಾಲ್ವರು ಎನ್ನಬಹುದು.

ಮಹಾಭಾರತದಲ್ಲಿ ಹಲವರು ಮನುಗಳು ಎಂಬ ಉಲ್ಲೇಖವಿದ್ದರೂ 'ಸ್ವಯಂಭುವಾದ್ಯಾ ಮನವಃ ಭೃಗ್ವಾದ್ಯಾ ಋಷಯಸ್ತಥಾ' (೧೩, ೧೪, ೨೮೦) ಎನ್ನುವಾಗ ಪುರಾಣದ ಚತುರ್ದಶ ಮನುಗಳ ಕಲ್ಪನೆಯನ್ನು ಕಾಣುವಹಾಗಿಲ್ಲ. ಒಂದೊಂದು ಮನ್ವಂತರದಲ್ಲೂ ಮನು, ಇಂದ್ರ, ಮನುಪುತ್ರರು, ಸಪ್ತರ್ಷಿಗಳು ಬೇರೆಬೇರೆಯಾಗಿರುವ ಎಣಿಕೆ ಮಾತ್ಸ್ಯಪುರಾಣ (೯), ವಿಷ್ಣುಪುರಾಣ (೩, ೧), ಹರಿವಂಶ (೧, ೭) ಮೊದಲಾದ ಪುರಾಣಗಳಲ್ಲಿದೆ. ಈ ಪೌರಾಣಿಕ ನಿರ್ದೇಶನಗಳಲ್ಲಿ ವೈವಸ್ವತ ಮನ್ವಂತರದ ಸಪ್ತರ್ಷಿಗಳು ಭೃಗ್ವಾದಿಯಲ್ಲ. ಅಲ್ಲಿನ ಏಳು ಋಷಿಗಳು 'ಮರೀಚಿ ಪ್ರಭೃತಯಃ' (ವಿಷ್ಣುಪುರಾಣ, ಭಾಗವತ)–ಮರೀಚಿ, ಆಂಗಿರಸ, ಅತ್ರಿ, ಪುಲಸ್ತ್ಯ, ಪುಲಹ, ಕ್ರತು ಮತ್ತು ವಶಿಷ್ಠ. ಇದೇ ಪಟ್ಟಿ ಬೇರೊಂದು ಸಂದರ್ಭದಲ್ಲಿ ಮಹಾಭಾರತದ ಶಾಂತಿಪರ್ವದಲ್ಲೂ (ನಾರಾಯಣೀಯೋಪಾಖ್ಯಾನ) ಬರುವುದೆನ್ನಿ. ಗೀತೆಯಲ್ಲಿ 'ಮಹರ್ಷಯಃ ಸಪ್ತ' ಎಂದು ಹೇಳಿದಾಗ ಈ ಏಳು ಜನರನ್ನೇ ಸೂಚಿಸಿದೆ

ಯೆಂದು ಕೆಲವರ ಅಭಿಪ್ರಾಯ. ಹಾಗಾದರೆ ಮಹಾಭಾರತದಲ್ಲಿ ಸ್ವಾಯಂಭುವನೇ ಮೊದಲಾದ ಮನುಗಳಿಗೆ ಹೊಂದಿಕೊಳ್ಳುವಂತೆ ಭೃಗುವೇ ಮೊದಲಾದ ಋಷಿಗಳನ್ನು ಹೇಳಿರುವುದು ಹೇಗೆ ? ಗೀತೆಯ 'ಮಹರ್ಷಯಃ ಸಪ್ತ' ಎನ್ನುವ ಪ್ರಸ್ತಾಪ ಭೃಗು, ನಾಭ, ವಿವಸ್ವಾನ್, ಸುಧಾಮ, ವಿರಜ, ಅತಿನಾಮ, ಸಹಿಷ್ಣು ಎಂಬುವರನ್ನು ಕುರಿತದ್ದೆಂದೂ, ಇವರು ಚಾಕ್ಷುಷ ಮನ್ವಂತರದ ಸಪ್ತರ್ಷಿಗಳೆಂದೂ, ವೈವಸ್ವತ ಮನ್ವಂತರಕ್ಕೆ ಹಿಂದಿನವರು ಎಂಬರ್ಥದಲ್ಲಿ 'ಪೂರ್ವೇ' ಎಂದು ಗೀತೆಯಲ್ಲಿ ವಿಶೇಷಿಸಲಾಗಿದೆಯೆಂದೂ ('ಮಹರ್ಷಯಃ ಸಪ್ತ ಪೂರ್ವೇ') ಕೆಲವು ವ್ಯಾಖ್ಯಾನಕಾರರ ವಾದ. ಅವರು ಗೀತೆಯಲ್ಲೇ ಇನ್ನೊಂದೆಡೆ ಬರುವ 'ಮಹರ್ಷೀಣಾಂ ಭೃಗುರಹಂ' (೧೦, ೨೫) ಎನ್ನುವ ಉಲ್ಲೇಖವನ್ನು ಸಮರ್ಥನೆಯಾಗಿ ತೋರಿಸುತ್ತಾರೆ. ಬ್ರಹ್ಮಾಂಡ ಪುರಾಣದಲ್ಲಿ (ಪೂರ್ವಭಾಗ, ೧೩, ೧೦೩) "ಭೃಗ್ವಂಗಿರಾ ಮರೀಚಿಶ್ಚ ಪುಲಸ್ತ್ಯಃ ಪುಲಹಃ ಕ್ರತುಃ, ಅತ್ರಿಶ್ಚೈವ ವಸಿಷ್ಠಶ್ಚ ಸಪ್ತ ಸ್ವಾಯಂಭುವೇಽಂತರೇ" ಎಂದು ಭೃಗ್ವಾದಿ ಸಪ್ತಋಷಿಗಳನ್ನು ಸ್ವಾಯಂಭುವ ಮನ್ವಂತರದಲ್ಲೇ ಎಣಿಸಿದ್ದಾರೆ. ಅದೇ ಪುರಾಣದಲ್ಲಿ (೧, ೫೩) "ಸಾವರ್ಣಾ ಮನವೋ ಯೇ ಚ ಚತ್ವಾರಸ್ತು ಮಹರ್ಷಿಜಾಃ" ಎಂದು ಹೇಳಿ ನಾಲ್ವರು ಸಾವರ್ಣಿಗಳು ಮಹರ್ಷಿಗಳ ಮಕ್ಕಳೆಂದು ಸೂಚಿಸಿದೆ : ಅವರು ಚಾಕ್ಷುಷ ಮನ್ವಂತರದಲ್ಲಿ ಹುಟ್ಟಿದವರೆಂದೂ ಹೇಳಿದೆ (ಉತ್ತರ ಭಾಗ, ೧, ೨೬ 'ಜಜ್ಞಿರೇ ಚಾಕ್ಷುಷೇಽಂತರೇ': 'ಚಾಕ್ಷುಷಸ್ಯಾಂತರೇಽತೀತೇ ಪ್ರಾಪ್ತೇ ವೈವಸ್ವತಸ್ಯ ಹಿ') ! ಎಂದರೆ ಸ್ವಾಯಂಭುವ ಮನ್ವಂತರದಿಂದ ಚಾಕ್ಷುಷ ಮನ್ವಂತರದವರೆಗೂ ಒಂದೇ ಹರವು ; ಈಗಿನ ವೈವಸ್ವತ ಮನ್ವಂತರಕ್ಕೆ ಹಿನ್ನೆಲೆಯಾಗಿ.

ಭಗವದ್ಗೀತೆಯ ಚೌಕಟ್ಟು ಈಗಿನ ಕಲ್ಪನೆಯಲ್ಲಿ ವೈವಸ್ವತ ಮನ್ವಂತರಕ್ಕೆ ಸಂಬಂಧಪಟ್ಟುದೇ. ಮೊದಲು ಯೋಗವನ್ನು ತಾನು ವಿವಸ್ವಾನನಿಗೆ ಹೇಳಿದುದಾಗಿಯೂ, ವಿವಸ್ವಾನನು ಮನುವಿಗೆ (ಎಂದರೆ ತನ್ನ ಮಗನಾದ ವೈವಸ್ವತ ಮನುವಿಗೆ) ಹೇಳಿದನೆಂದೂ ಕೃಷ್ಣನ ಒಕ್ಕಣೆಯೇ ಇದೆಯಷ್ಟೆ. ಅಲ್ಲಿ ಈ ಯೋಗವು 'ಮಹತಾ ಕಾಲೇನ ನಷ್ಟಃ' ಎಂಬಷ್ಟೇ ಇದೆ. ಈ ಮಹತ್ತಾದ ಕಾಲ ಎಂದರೇನು ? ವಿಷ್ಣು ಪುರಾಣದ ಒಕ್ಕಣೆಯಲ್ಲಿ (೧. ೩) ಈಗ ನಾವಿರುವುದು ಆರು ಮನ್ವಂತರಗಳು ಕಳೆದು ಏಳನೆಯ (ವೈವಸ್ವತ) ಮನ್ವಂತರದಲ್ಲೂ ಇಪ್ಪತ್ತೇಳು ಮಹಾಯುಗಗಳು ಕಳೆದು (ಒಂದು ಮಹಾಯುಗವೆಂದರೆ ೪೩ ಲಕ್ಷ ೨೦ ಸಾವಿರ ವರ್ಷಗಳೆಂದು ಒಂದು ಎಣಿಕೆ), ಇಪ್ಪತ್ತೆಂಟನೆಯ ಮಹಾಯುಗದಲ್ಲಿ ಮೊದಲ ಪಾದ ನಡೆಯುತ್ತಿರುವಾಗ.

ಕೃಷ್ಣನ ಮಾತಿನಲ್ಲಿ ಹೀಗೆ ಈ ಮನ್ವಂತರದಲ್ಲಿ ಇಪ್ಪತ್ತೇಳು ಮಹಾಯುಗಗಳು ಕಳೆಯಿತೆನ್ನುವ ಧ್ವನಿಯಿದೆಯೆ ? ವೈವಸ್ವತ ಮನುವಿನ ಮಗನಾದ ಇಕ್ಷ್ವಾಕುವನ್ನು (ಸೂರ್ಯವಂಶದ ಪ್ರವರ್ತಕ) ಅಷ್ಟು ದೂರ ಹಿಂದಕ್ಕೆ ತಳ್ಳಬಹುದೆ ?

ಈ ವಿವೇಚನೆಯಿಂದ ನನಗೆ ತೋರುವುದು, ಭಗವದ್ಗೀತೆಯಲ್ಲಿ ಮನ್ವಂತರದ ಕಲ್ಪನೆಯೇ ಕಾಣಸಿಗುವುದಿಲ್ಲ ; ಅದಕ್ಕೆ ಹಿಂದಿನ ವಾಙ್ಮಯದಲ್ಲೂ ಇಲ್ಲ. ಭಗವದ್ಗೀತೆಯಲ್ಲಿ 'ಮನವಃ' ಎಂಬ ಮಾತು ಬಂದಾಗ ಮನ್ವಂತರಗಳ ಪ್ರವರ್ತಕರು ಎಂಬರ್ಥ ಹೊರಡುವುದಿಲ್ಲ ; "ವಿವಸ್ವಾನನು ಮನುವಿಗೆ ಹೇಳಿದ" ಎನ್ನುವಾಗ ವೈವಸ್ವತ ಮನ್ವಂತರದ ಆದಿಪುರುಷ ಎಂಬ ಧ್ವನಿಯೇನೂ ಇಲ್ಲ. ವಿವಸ್ವಾನನೆಂದರೆ ಸೂರ್ಯನೆಂದು ಹೇಳಬೇಕಾದ ಕಾರಣವೂ ಇಲ್ಲ. ನಿಘಂಟು (೨, ೩, ೨೪) ಹೇಳುವಂತೆ, ವಿವಸ್ವಾನನೆಂದರೆ ಮೊದಲ ಮನುಷ್ಯ ಎಂದಷ್ಟೇ ಅರ್ಥ ಹೇಳಿದರೆ ಸಾಕು. ಋಗ್ವೇದವೂ (೧೦, ೬೫, ೬) 'ದೇವೇಭ್ಯೋ ದಾಶಾದ್ಧವಿಷಾ ವಿವಸ್ವತೇ' ಎನ್ನುವಾಗ ವಿವಸ್ವಾನರೆಂದರೆ ಮನುಷ್ಯರೇ. 'ಮನು'ವೆಂದರೆ ವಿಶಿಷ್ಟನಾದ ಮನುಷ್ಯ ; ರಾಜ ('ಪಾಲಯಿತಾ') ಎಂದಷ್ಟೇ ಅರ್ಥ. 'ಋಷಯಃ', 'ಮನವಃ' ಎಂದು ಭೇದವೆಣಿಸಿ ಹೇಳುವಾಗ ವಿದ್ಯಾಸಂಪ್ರದಾಯ ಪ್ರವರ್ತಕರು, ಪ್ರಜಾಪಾಲಕರು ಎಂದು ಶಂಕರಾಚಾರ್ಯರ ಅಭಿಪ್ರಾಯ ; 'ನಿತ್ಯಸೃಷ್ಟಿಪ್ರವರ್ತನೆ' ಮತ್ತು 'ನಿತ್ಯಸ್ಥಿತಿಪ್ರವರ್ತನೆ' ಎರಡನ್ನೂ ಸೂಚಿಸುವುದೆಂದು ರಾಮಾನುಜಾಚಾರ್ಯರ ಅಭಿಪ್ರಾಯ. ಈ ಅರ್ಥದಲ್ಲೇ ಯೋಗವು ಪರಂಪರಾಪ್ರಾಪ್ತವಾದುದೆಂದು ಗೀತೆ ಹೇಳುವಾಗ 'ರಾಜರ್ಷಯೋ ವಿದುಃ' (೪, ೨) ಎಂಬ ಮಾತು ಬಂದಿರುವುದು. ಸ್ಮೃತಿಗಳ ಪಾಲನೆ ಮನುಗಳ ಕರ್ತವ್ಯವೆಂದು ಕುಮಾರಿಲರು ಹೇಳಿರುವುದನ್ನು ಈಗಾಗಲೇ ಅರಿಕೆ ಮಾಡಿದ್ದೇನೆ. ಭಗವದ್ಗೀತೆಯು ರಾಜರ್ಷಿಗಳ ಪರಂಪರೆಯಲ್ಲಿ ಬಂದ ಭಾಗವತ ಪಂಥದ ಗ್ರಂಥವೇ ಆದುದರಿಂದ ಈ ಪ್ರಸ್ತಾಪ ಅಲ್ಲಿ ಪ್ರಸ್ತುತವೇ ಆಗಿದೆ.